ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಬನಪ್ಪ ಪಾರ್ಕ್

ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ನರೇಂದ್ರಕುಮಾರ್ ಎಸ್.ಎಸ್.**

ಲೇಖಕರು

**ರಮೇಶ ದೊಡ್ಡಪುರ**

**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**BANAPPA PARK:** An Introduction Book on Places in Karnataka that Played a Major Role in the Freedom Struggle, Written by Ramesh Doddapura, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ



**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ರಮೇಶ ದೊಡ್ಡಪುರ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೭೨

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧



**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು-560 001

## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

# ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಬೆಂಗಳೂರಿನ ಮುಖ್ಯರಸ್ತೆ, ಪಾರ್ಕು, ವೃತ್ತಗಳಿಗೆ ಅನೇಕ ಮಹನೀಯರ ಹೆಸರನ್ನು ಇಟ್ಟಿದ್ದಾರೆ. ಆ ಸ್ಥಳಗಳಿಗೆ ವಿಶೇಷ ಮಹತ್ವವೂ ಇದೆ. ಅಂತಹ ಸ್ಥಳದಲ್ಲಿ ಬನಪ್ಪ ಪಾರ್ಕ್ ಸಹ ಒಂದು. ಪತ್ರಕರ್ತನಾಗಿ ಅನೇಕ ಬಾರಿ ಬನಪ್ಪ ಪಾರ್ಕ್‌ನಲ್ಲಿ ವಿವಿಧ ಹೋರಾಟ, ಪ್ರತಿಭಟನೆಗಳನ್ನು ವೀಕ್ಷಿಸಿದ್ದ ನನಗೆ ಆ ಸ್ಥಳಕ್ಕೊಂದು ಐತಿಹಾಸಿಕ ಮಹತ್ವ ಇದೆ ಎನ್ನುವುದೇ ತಿಳಿದಿರಲಿಲ್ಲ.

ಈ ಸ್ಥಳದ ಕುರಿತು ಒಂದು ಕೃತಿ ರಚಿಸಬೇಕೆಂದು ಹೇಳಿದಾಗ ಸುಮಾರು ೫–೬ ಸಾವಿರ ಶಬ್ದಗಳಾಗುವಷ್ಟು ವಿಷಯ ಇದೆಯೇ ಎಂಬ ಅನುಮಾನವಿತ್ತು. ಅದಕ್ಕೆ ತಕ್ಕಂತೆಯೇ ೧೯೩೭ರ ಅಕ್ಟೋಬರ್ ೨೪ರಂದು ನಡೆದ ಕೆ.ಎಫ್. ನಾರಿಮನ್ ಘಟನೆ ಹೊರತು ಪಡಿಸಿ ಬೇರೆ ಉಲ್ಲೇಖಗಳು ಹೆಚ್ಚಾಗಿ ಸಿಗಲಿಲ್ಲ. ವಿವಿಧ ಪುಸ್ತಕಗಳನ್ನು ಹುಡುಕುತ್ತ ಹೋದಂತೆ ಒಂದೊಂದೇ ವಿಚಾರ ತಿಳಿಯುತ್ತ ಹೋಯಿತು. ಈ ಸ್ಥಳಕ್ಕೆ ಬನಪ್ಪ ಪಾರ್ಕ್ ಎಂದು ನಾಮಕರಣ ಮಾಡುವ ಮುನ್ನ ಯಾವ ಹೆಸರಿನಿಂದ ಕರೆಯಲಾಗುತ್ತಿತ್ತು ಎಂದು ಪರಿಶೀಲಿಸಲು ಮುಂದಾದಾಗ ಇದು ಬೆಂಗಳೂರು ಪೇಟೆ ಕೋಟೆಯ ದ್ವಾರದಲ್ಲಿತ್ತು ಎಂಬುದು ತಿಳಿಯಿತು. ಮತ್ತಷ್ಟು ಆಳಕ್ಕೆ ಇಳಿದಾಗ ಇದೇ ಬನಪ್ಪ ಪಾರ್ಕ್‌ನ ಮತ್ತೊಂದು ತುದಿಯನ್ನು ಯಲಹಂಕ ದ್ವಾರ ಎನ್ನಲಾಗುತ್ತಿತ್ತು, ಅದು ಈಗ ಮೈಸೂರು ಬ್ಯಾಂಕ್ ವೃತ್ತವಾಗಿದೆ. ಈ ಎರಡೂ ಸ್ಥಳಗಳಲ್ಲಿ ನಡೆದ ಹೋರಾಟಗಳು, ಸಮಾವೇಶಗಳು ಈಗಿನ ಕೆಂಪೇಗೌಡ ರಸ್ತೆ, ಅವೆನ್ಯೂ ರಸ್ತೆ (ಆಗಿನ ದೊಡ್ಡಪೇಟೆ), ಚಿಕ್ಕ ಲಾಲ್‌ಬಾಗ್‌ಗಳಲ್ಲೂ ಹೊಂದಿಕೊಂಡದ್ದು ತಿಳಿಯಿತು. ಇದೆಲ್ಲದರ ನಂತರ, ಬನಪ್ಪನವರ ಕುರಿತು ಯೋಚಿಸಿದಾಗ, ಅಲ್ಲಿನ ಪಾರ್ಕ್‌ನಲ್ಲಿ ಬಿಬಿಎಂಪಿ ನಿರ್ಮಿಸಿರುವ ಕಟ್ಟಡದಲ್ಲಿ ಭಾವಚಿತ್ರ ಬಿಟ್ಟರೆ ಬೇರೆ ವಿವರಗಳಿರಲಿಲ್ಲ. ಕೊನೆಗೆ



ಅವರ ಸಮುದಾಯ ಯಾವುದಿರಬಹುದೆಂದು ಹುಡುಕಿದಾಗ ದೇವಾಂಗ ಸಂಘವನ್ನು ಸಂಪರ್ಕಿಸಲಾಯಿತು. ಅಲ್ಲಿನ ಪದಾಧಿಕಾರಿಗಳು ಬಹಳ ಆಸ್ಥೆಯಿಂದ ಬನಪ್ಪನವರ ಕುಟುಂಬದವರ ಸಂಪರ್ಕ ಒದಗಿಸಿದರು. ಅಲ್ಲಿಯೂ ಸಾಕಷ್ಟು ಮಾಹಿತಿ ದೊರಕಿತು. ವಿಶೇಷವಾಗಿ, ಅಂತರ್ಜಾಲದ ಹುಡುಕಾಟದಲ್ಲಿ ದೊರಕಿದ ಸಂಕೇತಿ ಆಟೋಬಯಾಗ್ರಫೀಸ್, ದೇವುಡು ನರಸಿಂಹ ಶಾಸ್ತ್ರಿಯವರ ಜೀವನದಲ್ಲಿ ನಡೆದ ಘಟನೆ ಲಭಿಸಿತು. ಅದೆಲ್ಲಕ್ಕಿಂತಲೂ ಮುಖ್ಯವಾಗಿ ಡಾ. ಸೂರ್ಯನಾಥ ಕಾಮತರು ಸಂಪಾದಿಸಿರುವ ಬಿಡುಗಡೆಯ ಹಾಡು ಕೃತಿಯಲ್ಲಿ ದೊರಕಿದ 'ಕಾಂಗ್ರೆಸ್ ಲಾವಣಿ' ಬನಪ್ಪ ಪಾರ್ಕ್ ಕುರಿತೇ ಹೆಚ್ಚಾದ್ದದ್ದು ದೊರಕಿತು, ಅದು ಬಹಳ ಸುದೀರ್ಘವಾಗಿದ್ದು, ಬನಪ್ಪ ಪಾರ್ಕ್ ಬಗೆಗಿನ ಭಾಗಗಳನ್ನು ಮಾತ್ರ ಈ ಕೃತಿಯಲ್ಲಿ ಪ್ರಕಟಿಸಲಾಗಿದೆ. ಈ ಕೃತಿಯನ್ನು ಓದಿದವರಿಗೆ ಲಾವಣಿಯು ತಾನೇ ತಾನಾಗಿ ಅರ್ಥವಾಗುವಂತೆ ಸೊಗಸಾಗಿದೆ.

ಬೆಂಗಳೂರಿಗರು ಸಾಕಷ್ಟು ಅನುಕೂಲವಾಗಿ ವ್ಯಾಪಾರ ವ್ಯವಹಾರಗಳಲ್ಲಿ ತೊಡಗಿದ್ದವರು. ತಮಗೂ ಸ್ವಾತಂತ್ರ್ಯ ಬೇಕು ಎಂಬ ಮಾನಸಿಕತೆಗೆ ಹೊರಳುತ್ತಿರುವಾಗಲೇ ನಾರಿಮನ್ ಘಟನೆ ನಡೆಯಿತು. ಅಲ್ಲಿ ಪೊಲೀಸರ ವರ್ತನೆ, ನಂತರ ಮಿರ್ಜಾ ಇಸ್ಮಾಯಿಲ್ ಅವರ ಕ್ರಮಗಳಿಂದಾಗಿ ತೀವ್ರವಾಗಿಯೇ ಸ್ವಾತಂತ್ರ್ಯ ಚಳವಳಿಗೆ ಕಾರಣವಾಯಿತು ಈ ಸ್ಥಳ. ಒಟ್ಟಿನಲ್ಲಿ ಬೆಂಗಳೂರಿನ ಸ್ವಾತಂತ್ರ್ಯ ಚಳವಳಿಗೆ ನಾಂದಿಯಾದ ಬನಪ್ಪ ಪಾರ್ಕ್ ನಿಜಕ್ಕೂ ಒಂದು ಐತಿಹಾಸಿಕ ಸ್ಥಳ.

ಆಧುನಿಕತೆ ಹಾಗೂ ಅಭಿವೃದ್ಧಿಯ ಭರಾಟೆಯಲ್ಲಿ ಪಾರ್ಕಿನ ಅನೇಕ ಭಾಗಗಳನ್ನು ವಿವಿಧ ಸರ್ಕಾರಿ ಕಟ್ಟಡಗಳು, ಪಾರ್ಕ್ ಎಂದು ರೂಪಿಸಲಾಗಿದೆಯಾದರೂ ಬನಪ್ಪನವರು ಸ್ಥಾಪಿಸಿದ ಅಶ್ವತ್ಥಕಟ್ಟೆ, ಸರ್ಕಾರ ಸ್ಥಾಪಿಸಿರುವ ಸ್ತೂಪ ಇನ್ನೂ ಅಲ್ಲಿಯ ಕಥೆಯನ್ನು ಹೇಳುತ್ತಿವೆ. ಪ್ರತಿನಿತ್ಯ ಲಕ್ಷಾಂತರ ಜನರು ಹಾದುಹೋಗುವ ಈ ಬನಪ್ಪ ಪಾರ್ಕ್ ಮುಂದಿನ ಪೀಳಿಗೆಗೆ ಸ್ಫೂರ್ತಿ ನೀಡುವ ಕೇಂದ್ರವಾಗಲಿ. ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ೭೫ನೇ ವರ್ಷದಲ್ಲಿ ಇಂತಹ ಮಹತ್ವದ, ಆದರೆ ಅನೇಕರಿಗೆ ತಿಳಿಯದ ಸ್ಥಳಗಳ ಕೃತಿಗಳನ್ನು ಪ್ರಕಟಿಸುತ್ತಿರುವ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಕಾರ್ಯ

ಸ್ತುತ್ಯಾರ್ಹ. ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಬಿ.ವಿ. ವಸಂತಕುಮಾರ್ ಅವರಿಗೆ, ಈ ಕೃತಿಯನ್ನು ರಚಿಸಿಕೊಡಲು ತಿಳಿಸಿದ ಶ್ರೀ ವಾದಿರಾಜ್ ಅವರಿಗೆ, ಸಂಪಾದಕರಾದ ಶ್ರೀ ನರೇಂದ್ರಕುಮಾರ್ ಅವರಿಗೆ ನನ್ನ ಕೃತಜ್ಞತೆಗಳು.

– ರಮೇಶ ದೊಡ್ಡಪುರ

ಬೆಂಗಳೂರು
೨೬–೧೨–೨೦೨೧

## ಪರಿವಿಡಿ

| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೦ |
| ಪೀಠಿಕೆ | ೧೫ |
| ಬೆಂಗಳೂರಿಗರನ್ನು ಬಡಿದೆಬ್ಬಿಸಿದ ಬನಪ್ಪ ಪಾರ್ಕ್ | ೧೭ |
| ಬೆಂಗಳೂರಿನ ಮುತ್ತಿಗೆ | ೧೭ |
| ರಾಷ್ಟ್ರೀಯ ಜಾಗೃತಿಯತ್ತ ಚಿತ್ತ | ೨೪ |
| ಜವಾಬ್ದಾರಿ ಸರ್ಕಾರಕ್ಕಾಗಿ ಚಳವಳಿ | ೨೬ |
| ಗುಂಡೇಟು ತಿಂದಿದ್ದ ದೇವುಡು | ೩೦ |
| ಮಹಾರಾಜರಿಗೇ ಆಹ್ವಾನ | ೩೨ |
| ಹ್ಯಾಮಿಲ್ಟನ್ ಭವನ ಪ್ರಕರಣ | ೩೩ |
| ಕ್ವಿಟ್ ಇಂಡಿಯಾ ಹೋರಾಟ | ೩೯ |
| ಕಾಂಗ್ರೆಸ್ ಮೇಲೆ ಪ್ರತಿಬಂಧ | ೪೦ |
| ಗೋಲಿಬಾರ್ ಮತ್ತು ಸಾವುಗಳು | ೪೭ |
| ಭೂಗತ ಹೋರಾಟ | ೫೦ |
| ತವರುಮನೆಯೋ ಸೆರೆಮನೆಯೋ? | ೫೨ |
| ಕ್ವಿಟ್ ಇಂಡಿಯಾ ಚಳವಳಿಯ ಪರಿಣಾಮ | ೫೪ |
| ಲಾವಣಿಯಲ್ಲಿ ಬನಪ್ಪ ಪಾರ್ಕ್ | ೫೫ |

| | |
|---|---|
| ಕಾಂಗ್ರೆಸ್ ಲಾವಣಿ | ೫೫ |
| ಬನಪ್ಪನವರ ಕುರಿತು | ೫೮ |
| ಶ್ರೀಮಜ್ಜಯ ಚಾಮರಾಜೇಂದ್ರ ಒಡೆಯರ್ ಬಹದೂರವರು | ೬೦ |
| ಶ್ರೀಮಾನ್ ಬನಪ್ಪನವರು, ಬೆಂಗಳೂರು | ೬೧ |
| ಸ್ವಾತಂತ್ರ್ಯ ಸ್ಥೂಪ | ೬೨ |
| ಆಕರ | ೬೬ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೬೮ |


## ಪೀಠಿಕೆ

ವಿವಿಧ ಭಾಷೆ, ಸಮುದಾಯಗಳೊಂದಿಗೆ ನೆಮ್ಮದಿಯ ಜೀವನ ಕಂಡುಕೊಂಡಿದ್ದ ಬೆಂಗಳೂರನ್ನು ಆ ಗುಂಡಿನ ಶಬ್ದ ನಡುಗಿಸಿತ್ತು. ಸ್ವಾತಂತ್ರ್ಯ ಸಿಕ್ಕ ನಂತರ ಆರ್ಥಿಕ ಚಟುವಟಿಕೆ, ಉದ್ಯಮಗಳನ್ನು ಮತ್ತಷ್ಟು ಉತ್ತಮವಾಗಿ ನಡೆಸಿಕೊಳ್ಳಬಹುದು ಎಂದು ಬೆಂಗಳೂರಷ್ಟೆ ಅಲ್ಲದೆ ಮೈಸೂರು ರಾಜ್ಯದ ಜನರಲ್ಲಿ ಜಾಗೃತಿ ಮೂಡಿಸಿದ ದಿನ ೧೯೩೭ರ ಅಕ್ಟೋಬರ್ ೨೪. ಅಂದು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಒಬ್ಬರ ಪ್ರಾಣಪಕ್ಷಿಯು ಬ್ರಿಟಿಷ್ ಪೊಲೀಸರ ಗುಂಡಿನಿಂದ ಹಾರಿಹೋಗಿದ್ದು ಇಡೀ ಚಳವಳಿಗೆ ನೆಪವಾಯಿತು.

೧೯೩೭ರ ಅಕ್ಟೋಬರ್ ೨೪. ಬಾಂಬೆಯಲ್ಲಿ ವೀರ್ ನಾರಿಮನ್ ಎಂದೇ ಪ್ರಸಿದ್ಧವಾಗಿದ್ದ ಪಾರ್ಸಿ ಸಮುದಾಯದ ಕೆ.ಎಫ್. ನಾರಿಮನ್ ಅವರ ಬೆಂಗಳೂರು ಪ್ರವಾಸವಿತ್ತು. ಬ್ರಿಟಿಷ್ ಪ್ರಭುತ್ವವನ್ನು ಎದುರಿಸುವುದರಲ್ಲಿ ಧೀರ, ಗಂಡುಗಲಿ ಜತೆಗೆ ಮಹಾ ಮೇಧಾವಿ, ಜನರ ಹೃದಯಾಂತರಾಳವನ್ನು ಹೊಕ್ಕಬಲ್ಲವರು ನಾರಿಮನ್. ಅವರ ವಾಕ್ಚತುತ್ವ, ವಾಗ್ಝರಿಯನ್ನು ಕಂಡು ಬೆರಗಾಗದವರು ಇರಲಿಲ್ಲ. ರಾಷ್ಟ್ರೀಯವಾದಿಗಳಾಗಿದ್ದ ನಾರಿಮನ್, ಯಾವುದೇ ಮುಚ್ಚುಮರೆಯಿಲ್ಲದೆ ಬ್ರಿಟಿಷರ ಬಣ್ಣ ಬಯಲು ಮಾಡುತ್ತಿದ್ದರು. ಅವರ ಹೆಸರಿನಲ್ಲೆ ಇದೀಗ ಪ್ರಸಿದ್ಧವಾಗಿರುವ ಮುಂಬೈನ ನಾರಿಮನ್ ಪಾಯಿಂಟ್ ಅನ್ನು ಹೆಸರಿಸಲಾಗಿದೆ.

ಮೈಸೂರು ಮಹಾರಾಜರ ಆಳ್ವಿಕೆಯಲ್ಲಿ ಸುಖವಾಗಿದ್ದ ಮೈಸೂರಿನಲ್ಲಿ "ಜವಾಬ್ದಾರಿ ಸರ್ಕಾರ" ಬೇಕೆಂಬ ಬೇಡಿಕೆ ಚಿಗುರೊಡೆದಿತ್ತು. ಇದೇ ಹೋರಾಟದ ಭಾಗವಾಗಿ, ಈಗಿನ ಹಡ್ಸನ್ ವೃತ್ತದ ಬಲಗಡೆಯಿರುವ ಬನಪ್ಪ ಪಾರ್ಕ್‌ನಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಭಾಷಣ ಮಾಡುವ ಕಾರ್ಯಕ್ರಮ ನಿಗದಿಯಾಯಿತು. ಈಗಲೇ ಸ್ವಾತಂತ್ರ್ಯ ಹೋರಾಟಗಾರರು ನೀಡುತ್ತಿರುವ ಉಪಟಳ ಸಾಕಾಗಿದೆ ಎನ್ನುತ್ತಿದ್ದ ಬ್ರಿಟಿಷ್ ಪೊಲೀಸರು, ನಾರಿಮನ್ ಮಾತನಾಡಿ

ಹೋದರೆ ಯಾವ ಮಟ್ಟಕ್ಕೆ ಏರಬಹುದು ಎಂದು ಊಹಿಸಿ ಬೆವರು ತರಿಸಿಕೊಂಡರು. ನೆರೆದಿದ್ದ ಅಪಾರ ಜನಸ್ತೋಮವನ್ನುದ್ದೇಶಿಸಿ ನಾರಿಮನ್ ಉಗ್ರ ಭಾಷಣ ಆರಂಭಿಸಿದರು. ಕೆಲ ಹೊತ್ತು ಆಗುವಷ್ಟರಲ್ಲಿ, ಭಾಷಣವನ್ನು ನಿಷೇಧಿಸಲಾಗಿದೆ ಎಂಬ ಆದೇಶ ನಾರಿಮನ್ ಅವರ ಕೈಗೆ ಸಿಕ್ಕಿತು. ಆದರೂ ಮಾತು ಮುಂದುವರಿಸುತ್ತಿದ್ದ ಸಮಯದಲ್ಲೆ, ಬಸಪ್ಪ ಎಂಬ ಪೊಲೀಸ್ ಅಧಿಕಾರಿಯು ನಾರಿಮನ್ ಅವರನ್ನು ಹೀನಾಮಾನವಾಗಿ ತೆಗಳಿ, ದಸ್ತಗಿರಿ ಮಾಡಿದ. ಒರಟಾಗಿ ಅಲ್ಲಿಂದ ಸಾಗಹಾಕಿದ. ಜನರು ಬಸಪ್ಪನವರ ವರ್ತನೆಯನ್ನು ಖಂಡಿಸಿದುದಲ್ಲದೆ, ಅದನ್ನು ತೀವ್ರವಾಗಿ ಪ್ರತಿಭಟಿಸಿದರು.

ಸರ್ಪಭೂಷಣ ಮಠದ ಅನೇಕ ವಿದ್ಯಾರ್ಥಿಗಳೂ ಈ ಸಭೆಗೆ ತೆರಳಿದ್ದರು. ಈಗಿನ ಮೆಜೆಸ್ಟಿಕ್ ಸಮೀಪದಲ್ಲೆ ಸರ್ಪಭೂಷಣ ಮಠ ಇದೆ. ಅಲ್ಲಿನ ಗುರುಗಳಾದ ಮಹದೇವ ಸ್ವಾಮಿಗಳು ವಿದ್ಯಾರ್ಥಿಗಳ ಮೇಲೆ ಸಾಕಷ್ಟು ಪ್ರಭಾವ ಬೀರಿದವರು. ದೇಶಭಕ್ತಿ, ವಿಶ್ವಪ್ರೇಮದಂಥ ಸದ್ಗುಣಗಳನ್ನು ಅವರು ಎಳೆಯರಲ್ಲಿ ಬಿತ್ತಿ, ಬೆಳೆದರು.

ಕಾರ್ಯಕ್ರಮದ ವೇದಿಕೆಗೆ ೧೫–೨೦ ಅಡಿಗಳ ದೂರದಲ್ಲಿ ೮–೯ ವರ್ಷದ ಮಕ್ಕಳೂ ಕುಳಿತು ದೇಶದ ಪರಿಸ್ಥಿತಿಯನ್ನು ತಿಳಿದರು. ಈ ಘಟನೆಯನ್ನು ಅಕ್ಕಪಕ್ಕದ ಶಾಲೆಗಳಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳು ಬೆರಗುಗಣ್ಣಿನಿಂದ ನೋಡುತ್ತಿದ್ದರು. ನಮ್ಮ ದೇಶದಲ್ಲಿ ಹೀಗೇಕೆ ಆಗುತ್ತಿದೆ ಎಂದು ಯೋಚಿಸುತ್ತಿದ್ದರು.

ಬಸಪ್ಪನವರ ವರ್ತನೆಯನ್ನು ಖಂಡಿಸಿ ವಿದ್ಯಾರ್ಥಿಗಳೂ ಹಾಗೂ ಸಭೆಯಲ್ಲಿದ್ದ ಇತರರೂ ರೇಗಿ ಪೊಲೀಸಿನವರ ಮೇಲೆ ಚಪ್ಪಲಿಗಳನ್ನು ಎಸೆದರು. ಬಿದ್ದಿದ್ದ ಚಪ್ಪಲಿ ರಾಶಿ ಬಹು ದೊಡ್ಡದಾದ ಕುಪ್ಪೆಯಾಯಿತು.

ನಾರಿಮನ್ನರನ್ನು ಕೂರಿಸಿಕೊಂಡ ಪೊಲೀಸರ ವಾಹನ ಹೊರಡುತ್ತಿದ್ದಂತೆ ಜನರ ಕಲ್ಲುತೂರಾಟ, ಘೋಷಣೆಗಳು ಪ್ರಾರಂಭವಾದವು. ಹೆಚ್ಚಿನ ಪೊಲೀಸ್ ದಳಗಳು ಬಂದವು. ಲಾಠಿಚಾರ್ಜ್ ಆಯಿತು. ಪುಟ್ಟ ಬಾಲಕರು ಹೇಗೋ ನುಸುಳಿ ತಪ್ಪಿಸಿಕೊಂಡರು. ಆಗ ಗೋಲಿಬಾರ್ ಆಯಿತು. ಅಂದಾದುಂದಿಯಲ್ಲಿ ಪೊಲೀಸರು ಹಾರಿಸಿದ ಗುಂಡಿಗೆ ಒಬ್ಬ ಸ್ವಾತಂತ್ರ್ಯ ಹೋರಾಟಗಾರನ ಬಲಿದಾನವಾಯಿತು. ಅಲ್ಲಿಗೆ ಮೈಸೂರು ಸಂಸ್ಥಾನದಲ್ಲಿ ಮಲಗಿ ನಿದ್ರಿಸುತ್ತಿದ್ದ ಜನರಲ್ಲಿ, ಬದಲಾವಣೆಯನ್ನು ತರಬೇಕು ಎಂಬ ಮನಸ್ಸಾಯಿತು.

# ಬೆಂಗಳೂರಿಗರನ್ನು ಬಡಿದೆಬ್ಬಿಸಿದ ಬನಪ್ಪ ಪಾರ್ಕ್

## ಬೆಂಗಳೂರಿನ ಮುತ್ತಿಗೆ

ಬ್ರಿಟಿಷ್ ವಿರುದ್ಧ ಸ್ವಾತಂತ್ರ್ಯ ಹೋರಾಟಕ್ಕೂ ಮುನ್ನ ಈ ನೆಲದಲ್ಲಿ ಅನೇಕ ಕಾಳಗಗಳು ನಡೆದಿವೆ. ಅವುಗಳಲ್ಲಿ, ಟಿಪ್ಪು ಸುಲ್ತಾನ ಹಾಗೂ ಗವರ್ನರ್ ಕಾರನ್ ವಾಲೀಸನ ನಡುವಿನ ಬೆಂಗಳೂರು ಮುತ್ತಿಗೆ ಪ್ರಮುಖವಾದದ್ದು.

೧೭ನೇ ಶತಮಾನದ ಅಂತ್ಯದಲ್ಲಿ ಬೆಂಗಳೂರನ್ನು ಆಳುತ್ತಿದ್ದ ಟಿಪ್ಪು ಸುಲ್ತಾನನು ಇಂಗ್ಲಿಷರಿಗೆ ಅನೇಕ ವಿಧವಾದ ಕಿರುಕುಳಗಳನ್ನು ಕೊಡುತ್ತಿದ್ದುದೇನೋ ನಿಜ. ಆದರೆ ಅನವಶ್ಯಕವಾಗಿ ಅವರ ತಂಟೆಗೆ ಹೋಗುತ್ತಿರಲಿಲ್ಲ. ತನ್ನೊಂದಿಗೆ ಮಾಡಿಕೊಂಡ ಒಪ್ಪಂದಗಳನ್ನು ಮೀರಿ ಅವರೇನಾದರೂ ವರ್ತಿಸಿದರೆ, ಅಥವಾ ತನ್ನ ಸೀಮೆಯೊಳಕ್ಕೆ ಸೈನ್ಯ ನುಗ್ಗಿಸಿದರೆ, ಇಲ್ಲವೇ ತನ್ನ ಅಧೀನ ರಾಜರನ್ನೋ, ಅಧಿಕಾರಿಗಳನ್ನೋ ಸೆರೆಹಿಡಿದರೆ, ಅಥವಾ ಸುಲ್ತಾನನಿಗೆ ಸೇರಿದ ಊರುಗಳನ್ನು ವಶಪಡಿಸಿಕೊಂಡರೆ ಮಾತ್ರ ಇಂಗ್ಲಿಷರ ಮೇಲೆ ಯುದ್ಧಕ್ಕೆ ನಿಲ್ಲುತ್ತಿದ್ದ.

ಕರ್ನಲ್ ಫ್ಲಾಯಿಡ್, ಜನರಲ್ ಮೆಡೋಸ್ ಮುಂತಾದ ಬ್ರಿಟಿಷ್ ಅಧಿಕಾರಿಗಳಿಗೆ ಟಿಪ್ಪು ಸುಲ್ತಾನನನ್ನು ಸೋಲಿಸಲು ಸಾಧ್ಯವಾಗಲಿಲ್ಲ. ಹೀಗಾಗಿ ಗವರ್ನರ್ ಜನರಲ್ ಕಾರನ್ ವಾಲೀಸನೇ ಈ ಕಾರ್ಯವನ್ನು ಕೈಗೆತ್ತಿಕೊಂಡ. ಮದ್ರಾಸಿಗೆ ಬಂದು ಸೈನ್ಯದ ಸರ್ವಾಧಿಕಾರವನ್ನು ವಹಿಸಿಕೊಂಡ. ಮದ್ರಾಸ್ ಸೇನೆಯಲ್ಲಿದ್ದ ಎಲ್ಲ ತುಕಡಿಗಳೂ ವೇಲೂರಿನಲ್ಲಿ ಒಟ್ಟಾದುವು. ಮದ್ರಾಸಿನಿಂದ

ಶ್ರೀರಂಗಪಟ್ಟಣಕ್ಕೆ ನೇರವಾದ ಮಾರ್ಗ ಯಾವುದೆಂಬುದನ್ನು ಕಂಡುಹಿಡಿಯಲು ತಜ್ಞರಿಗೆ ಸೂಚನೆ ನೀಡಲಾಯಿತು. ಅವರು ನಕ್ಷೆಗಳನ್ನು ಪರಿಶೀಲಿಸಿ, ಮದ್ರಾಸಿನಿಂದ ವೇಲೂರು, ಅಲ್ಲಿಂದ ಬೆಂಗಳೂರು, ಮುಂದೆ ಚನ್ನಪಟ್ಟಣ, ಮದ್ದೂರು, ಮಂಡ್ಯ ಮೂಲಕ ಶ್ರೀರಂಗಪಟ್ಟಣವನ್ನು ಸೇರುವುದೇ ನೇರವಾದ ಮಾರ್ಗವೆಂದು ಸೂಚಿಸಿದರು.

೧೭೯೧ರ ಫೆಬ್ರವರಿ ಐದರಂದು ದಂಡಿನೊಡನೆ ಸೇನಾಯಾತ್ರೆಯನ್ನು ಆರಂಭಿಸಿದ. ಫೆಬ್ರವರಿ ಹನ್ನೊಂದರಂದು ದಂಡು ವೇಲೂರನ್ನು ತಲುಪಿತು. ಅಲ್ಲಿ ಇನ್ನಷ್ಟು ಸೇನೆಯನ್ನು ಜೊತೆ ಮಾಡಿಕೊಂಡು ಈ ಮಹಾ ಸೇನೆ ಅಂಬೂರ್ ಕಣಿವೆ ಮೂಲಕ ಮುನ್ನಡೆಯಿತು. ಈ ಮಧ್ಯೆ ಗೂಢಚಾರರ ದಳದ ಮುಖ್ಯಾಧಿಕಾರಿಯಾಗಿದ್ದ ಕರ್ನಲ್ ರೀಡ್ ಎಂಬಾತನು ಅನೇಕ ಸಣ್ಣ ಪುಟ್ಟ ಪಾಳೆಯಗಾರರನ್ನು ತನ್ನ ವಶಪಡಿಸಿಕೊಂಡು ಇಂಗ್ಲಿಷರಿಗೆ ನೆರವಾಗುತ್ತಿದ್ದ. ಈ ಪಾಳೆಯಗಾರರು ಹೈದರ್ ಅಲಿ ಮತ್ತು ಟಿಪ್ಪುವಿನ ದುರಾಡಳಿತದಿಂದಾಗಿ ಬೇಸತ್ತು ನಾನಾ ವಿಧವಾದ ಸಂಕಷ್ಟಗಳಿಗೆ ಗುರಿಯಾಗಿದ್ದರು. ಆದ್ದರಿಂದ ಇಂಗ್ಲಿಷರಿಂದ ಸಾಕಷ್ಟು ಲಂಚ ಪಡೆದು, ಅವರ ಪರವಾಗಿ ಹೋರಾಡುವುದಾಗಿ ಮಾತುಕೊಟ್ಟರು.

ಕಾರನ್‌ವಾಲೀಸನ ದಂಡು ಶ್ರೀರಂಗಪಟ್ಟಣದತ್ತ ಮುನ್ನಡೆದಿದ್ದ ಸುದ್ದಿ ಸುಲ್ತಾನನಿಗೆ ತಿಳಿಯಿತು.

ಇತ್ತ ಬೆಂಗಳೂರಿನ ವರ್ತಕರಿಗೆ ಇಂಗ್ಲಿಷರು ಬಂದು ಮುತ್ತಿಗೆ ಹಾಕುವರೆಂಬ ಸುದ್ದಿ ಮೊದಲೇ ತಿಳಿದಿತ್ತು. ಬಹಳ ವರ್ಷಗಳಿಂದ ಯುದ್ಧದ ಸವಿಯನ್ನೇ ಕಾಣದ ಬೆಂಗಳೂರಿನ ಜನಕ್ಕೆ ಈ ಹೊಸ ಸುದ್ದಿ ಗಾಬರಿಯನ್ನೇ ಹುಟ್ಟಿಸಿತು. ಬೆಂಗಳೂರು ಬಿಟ್ಟು ಹೋಗುವುದೇ– ಬೇಡವೇ ಎಂಬುದೇ ಈ ಜನಕ್ಕೆ ದೊಡ್ಡ ಯೋಚನೆಯಾಯಿತು.

ಬೆಂಗಳೂರು ನಗರ ನಿವಾಸಿಗಳಾದರೋ ತಮ್ಮ ಆತ್ಮರಕ್ಷಣೆಯತ್ತ ಮೊದಲು ಗಮನ ಹರಿಸಿದರು. ಅನೇಕರು ತಮ್ಮಲ್ಲಿದ್ದ ನಗದು, ಒಡವೆ ವಸ್ತು ಇತ್ಯಾದಿಗಳನ್ನು ತಂತಮ್ಮ ಹಿತ್ತಲುಗಳಲ್ಲಿ ಹಳ್ಳ ತೆಗೆದು ಹೂತಿಟ್ಟರು. ಹೊರಗಡೆಯಿಂದ ಬರುತ್ತಿದ್ದ ಸರಕುಗಳು ನಿಂತುಹೋದವು. ತರಗು ಪೇಟೆಯಲ್ಲಿ ದಿನಸಿ ಪದಾರ್ಥಗಳು





**ಬೆಂಗಳೂರು ಪೇಟೆ ಗೇಟ್ ಕೋಟೆಯ ವಿಹಂಗಮ ನೋಟ,**
**ಚಿತ್ರ: ರಾಬರ್ಟ್‌ಹೋಮ್(೧೭೯೨). ಕೃಪೆ: ಬ್ರಿಟಿಷ್ ಲೈಬ್ರರಿ**

ಕಾಣದಾಯಿತು. ಒಟ್ಟಿನಲ್ಲಿ ಆಹಾರಕ್ಕಾಗಿ ಕೋಟೆಯೊಳಗಿದ್ದ ಜನ ಹಾಹಾಕಾರ ಪಡುವಂತಾಯಿತು. ಕೆಲವರಂತೂ ಕೋಟೆಯಲ್ಲಿದ್ದ ಕಿಲ್ಲೇದಾರನ ಕಚೇರಿಗೆ ಹೋಗಿ ಇಂಗ್ಲಿಷರು ಮುತ್ತಿಗೆ ಹಾಕುವುದು ನಿಜವೇ? ಎಂದು ಕೇಳತೊಡಗಿದರು. ಇವರಿಗೆ ಉತ್ತರ ನೀಡಲು ತೋಚದೆ ಅಲ್ಲಿನ ಅಧಿಕಾರಿಗಳು, "ಇಂಗ್ಲಿಷ್ ಸೈನ್ಯ ಬೆಂಗಳೂರಿಗೇಕೆ ಬರುತ್ತದೆ? ಅದು ಶ್ರೀರಂಗಪಟ್ಟಣಕ್ಕೆ ನೇರವಾಗಿ ಹೋಗಬಹುದಲ್ಲವೇ?" ಎಂದು ಹಾರಿಕೆಯ ಉತ್ತರ ಹೇಳತೊಡಗಿದರು.

ಬೆಂಗಳೂರು ಪಟ್ಟಣದಲ್ಲಿ ಸುಲ್ತಾನನಿಗೆ ವಿರುದ್ಧವಾದ ಒಂದು ಗುಂಪು ಇತ್ತು. ಈ ಪಕ್ಷದವರೆಲ್ಲಾ ಸೇರಿ ಒಂದು ರಹಸ್ಯ ವ್ಯೂಹವನ್ನು ರಚಿಸಿಕೊಂಡಿದ್ದರು. ಇವರ ಉದ್ದೇಶಗಳು ಎರಡು. ಪಟ್ಟಣಕ್ಕೆ ರಕ್ಷಣೆ ನೀಡುವುದೊಂದು, ಸುಲ್ತಾನನ ಅದಕ್ಷ ಆಡಳಿತವನ್ನು ಕೊನೆಗಾಣಿಸುವುದು ಇನ್ನೊಂದು. ಅರ್ಥಾತ್ ಇಂಗ್ಲಿಷರಿಗೆ ಪರೋಕ್ಷವಾಗಿ ನೆರವು ನೀಡುವುದು. ಒಂದು ವೇಳೆ ಯುದ್ಧ ಅನಿವಾರ್ಯವಾದರೆ, ಪಟ್ಟಣವೇ ರಣರಂಗವಾದರೆ ಜನರಿಗೆ ರಕ್ಷಣೆ ನೀಡುವುದು ಹೇಗೆಂಬ ವಿಚಾರದಲ್ಲಿ ಈ ಪಕ್ಷ ಆಸಕ್ತಿ ವಹಿಸಿತು. ಇಂಗ್ಲಿಷ್ ಸೈನ್ಯಕ್ಕೆ ಆಹಾರ ಪದಾರ್ಥಗಳನ್ನು

ಸರಬರಾಜು ಮಾಡಿದರೆ ಹೆಚ್ಚು ಬೆಲೆ ಸಿಗುತ್ತದೆಂದು ವರ್ತಕರಿಗೆ ಆಶೆ ಹುಟ್ಟಿಸಿದರು. ಅಂತೂ ಇಂಗ್ಲಿಷರಿಗೆ ಪರೋಕ್ಷವಾದ ನೆರವು ದೊರೆಯುವ ಸಂಭವ ಉಂಟಾಯಿತು.

೧೭೯೧ರ ಫೆಬ್ರವರಿ ೨೮ರಂದು ಕೋಲಾರ ಇಂಗ್ಲಿಷರ ವಶವಾಯಿತು. ಯಾವ ಅಡೆತಡೆಗಳೂ ಇಲ್ಲದೆ ಮುನ್ನಡೆದ ಈ ಸೈನ್ಯ ಮಾರ್ಚ್ ಐದರ ವೇಳೆಗೆ ಹೊಸಕೋಟೆಯನ್ನು ತಲುಪಿತು. ಬೆಂಗಳೂರಿಗೆ ಉಳಿದಿದ್ದುದು ಕೇವಲ ಹದಿನೈದು ಮೈಲಿಗಳು ಮಾತ್ರ. ಆಂಬೂರ್ ಘಾಟ್ ಮಾರ್ಗವಾಗಿ ಇಂಗ್ಲಿಷರು ಬರಬಹುದೆಂದುಕೊಂಡು ಊಹಿಸಿ ಕಾದು ಕುಳಿತಿದ್ದ ಟಿಪ್ಪು ಮೋಸ ಹೋಗಿದ್ದ. ಕಾರನ್ ವಾಲೀಸನ ಸೈನ್ಯದಲ್ಲಿ ೨೨,೩೦೦ ಮಂದಿ ನುರಿತ ಸೈನಿಕರಿದ್ದರು. ಇಷ್ಟಲ್ಲದೇ ಸೇವಕರು, ಹೆಂಗಸರು, ಗಂಡಸರು ಎಲ್ಲಾ ಸೇರಿ ಒಂದು ಲಕ್ಷ ಮೂವತ್ತು ಸಾವಿರ ಮಂದಿಯ ಬೃಹತ್ ಪಡೆ ಅದು.

ಕಾರನ್ ವಾಲೀಸನ ಸೈನ್ಯದಲ್ಲಿ ಈ ಜನಸಾಗರವಲ್ಲದೆ ೮೦,೦೦೦ ಗಾಡಿಗಳು, ಒಂಟೆಗಳೂ, ಕುದುರೆಗಳೂ ಇದ್ದವು. ಒಂದು ನೂರು ಆನೆಗಳೂ, ಆನೆಯೊಂದಿಗೆ ಇನ್ನೂರು ಮಂದಿ ಮಾವಟಿಗರೂ ಇದ್ದರು.

೧೭೯೧ರ ಮಾರ್ಚ್ ೫ರಂದು ಸೇನೆಯು ಹೊಸಕೋಟೆಯಿಂದ ಬೆಂಗಳೂರಿನ ಈಶಾನ್ಯ ದಿಕ್ಕಿನಲ್ಲಿ ಠಿಕಾಣಿ ಹೂಡಿತು. ಅಲ್ಲಿಂದ ಕಾರನ್ ವಾಲೀಸನು ಹೆಚ್ಚು ತಡ ಮಾಡಲಿಲ್ಲ. ಈಗಿನ ಹಲಸೂರು ಗೇಟ್ ಪೊಲೀಸ್ ಠಾಣೆ ಇರುವ ಜಾಗದಲ್ಲಿ ಅಂದರೆ ಬನಪ್ಪ ಪಾರ್ಕ್ ಬಳಿಯಲ್ಲಿ ಕಾರ್ಯಾಚರಣೆಗೆ ಅಂತಿಮ ಸಿದ್ಧತೆಯನ್ನು ಸೈನ್ಯ ಮಾಡಿಕೊಂಡಿತು. ಈಗಿನ ಬನಪ್ಪ ಪಾರ್ಕ್, ಬೆಂಗಳೂರು ಕೋಟೆಯ ಗಡಿ ಭಾಗವಾಗಿತ್ತು. ಅಲ್ಲಿಂದ ಸುಮಾರು ೬೦೦ ಮೀಟರ್ ದೂರದಲ್ಲೆ ತಾರಾಮಂಡಲ ಪೇಟೆ ಇತ್ತು. ಪೇಟೆಯ ಸುತ್ತಲೂ ದೊಡ್ಡ ಕಂದಕವಿತ್ತು. ಶತೃಗಳು ನುಗ್ಗಲಾಗದಂತೆ ಸುತ್ತಲೂ ಮುಳ್ಳಿನ ಪೊದೆಗಳನ್ನು ಬೆಳೆಸಲಾಗಿತ್ತು. ಸ್ಥಳೀಯರೇ ಅವುಗಳನ್ನು ತೆರವುಗೊಳಿಸಿ ಬ್ರಿಟಿಷರ ಹಾದಿಯನ್ನು ಸುಗಮಗೊಳಿಸಿದರು. ಕ್ಷಣಮಾತ್ರದಲ್ಲಿ ತಾರಾಮಂಡಲ ಪೇಟೆಯನ್ನು ಕಾರನ್ ವಾಲೀಸನ ಸೈನ್ಯ ವಶಪಡಿಸಿಕೊಂಡಿತು. ಈ ಸೆಣೆಸಾಟದಲ್ಲಿ ಟಿಪ್ಪು ಕಡೆಯ ಕಿಲ್ಲೇದಾರ್ ಬಹದ್ದೂರ್ ಖಾನ್ ಹಾಗೂ ಇಂಗ್ಲಿಷರ ಕಡೆಯ ಕರ್ನಲ್ ಮೂರ್ ಹೌಸ್ ಅಸುನೀಗಿದರು.



ಕರ್ನಲ್ ಜೋಸೆಫ್ ಮೂರ್ ಹೌಸ್ ೧೭೬೮ರಲ್ಲಿ ಮದ್ರಾಸ್ ಆರ್ಟಿಲರಿಗೆ ಸೇರ್ಪಡೆಯಾಗಿದ್ದ. ಬೆಂಗಳೂರು ಪೇಟೆಯನ್ನು ವಶಪಡಿಸಿಕೊಳ್ಳುವ ಸೆಣೆಸಾಟದ ನೇತೃತ್ವ ವಹಿಸಿದ್ದ ಮೂರ್ ಹೌಸ್ ಗಾಯಗೊಂಡು ನಿಧನವಾದ ವಿವರವನ್ನು ರಾಬರ್ಟ್ ಹೋಮ್(೧೭೫೨–೧೮೩೪) ಅಮೋಘವಾಗಿ ಚಿತ್ರಿಸಿದ್ದಾರೆ. ಪೇಟೆಕೋಟೆಯ ಎದುರು ಗಾಯಗೊಂಡ ಮೂರ್‌ಹೌಸ್ ರಣಾಂಗಣದ ನಡುವಿನಲ್ಲಿ ಎದೆ ಹಿಡಿದುಕೊಂಡು ಬಿದ್ದಿದ್ದರೆ, ಸುತ್ತಲಿನ ಸೈನಿಕರು ಸಂತೈಸುತ್ತಿದ್ದಾರೆ. ೭೪ನೇ ಹೈಲೆಂಡ್ ರೆಜಿಮೆಂಟಿನ ಕ್ಯಾಪ್ಟನ್‌ಗಳಾದ ಡಗ್ಲಸ್, ವೈಟ್, ವಿಂಚ್, ಬರ್ನ್ ಜತೆಗಿದ್ದರೆ, ಮೇಜರ್ ಜನರಲ್ ವಿಲಿಯಂ ಮೀಡೋಸ್ ಕಂದು ಬಣ್ಣದ ಕುದುರೆಯಲ್ಲಿದ್ದಾನೆ.



**ಚಿತ್ರ: ಸ್ಟೋರ್ಮಿಂಗ್ ಆಂಡ್ ಟೇಕಿಂಗ್ ಬ್ಯಾಂಗಲೋರ್, ಮಾರ್ಕಿಸ್ ಕಾರನ್ ವಾಲಿಸ್.**



**ಚಿತ್ರ: ರಾಬರ್ಟ್ ಹೋಮ್(೧೭೯೩). ಕೃಪೆ: ಇಂಡಿಯನ್ ಆರ್ಮಿ ಮೆಮೊರಿಯಲ್ ರೂಂ, ನ್ಯಾಷನಲ್ ಆರ್ಮಿ ಮ್ಯೂಸಿಯಂ, ಸ್ಯಾಂಧರ್ಸ್ಟ್, ಇಂಗ್ಲೆಂಡ್.**



**ಮದ್ರಾಸ್‌ನ ಸೈಂಟ್ ಮೇರೀಸ್ ಚರ್ಚ್‌ನಲ್ಲಿರುವ ಕರ್ನಲ್ ಜೋಸೆಫ್ ಮೂರ್‌ಹೌಸ್ ಸ್ಮಾರಕ.**





**ಯುದ್ಧದ ನಂತರ ಹಾನಿಯಾಗಿದ್ದ ಕೋಟೆಯ ಭಾಗಗಳನ್ನು ಟಿಪ್ಪು ಸೈನಿಕರ ಸಹಾಯದಿಂದ ಬ್ರಿಟಿಷರು ದುರಸ್ತಿ ಮಾಡಿಸುತ್ತಿರುವುದು. ಚಿತ್ರ: ಬ್ರಿಟಿಷ್ ಸೈನ್ಯದಲ್ಲಿದ್ದು ಬೆಂಗಳೂರು ಯುದ್ಧದಲ್ಲಿ ಭಾಗಿಯಾಗಿದ್ದ ಲೆಫ್ಟಿನೆಂಟ್ ಜೇಮ್ಸ್ ಹಂಟರ್. ಕೃಪೆ:** sarmaya.in

ಪೇಟೆ ಇಂಗ್ಲಿಷರ ವಶವಾದ ಸುದ್ದಿ ಕೇಳಿ ಟಿಪ್ಪು ಸುಲ್ತಾನನಿಗೆ ದಿಗ್ಭ್ರಮೆಯಾಯಿತು. "ಇದರಲ್ಲಿ ಏನೋ ಸಂಚು ಅಡಗಿದೆ" ಎಂದು ಆಲೋಚಿಸಿದ. ಇಷ್ಟೇ ಸಾಲದೆಂಬಂತೆ ಬೆಂಗಳೂರನ್ನು ಕಳೆದುಕೊಂಡಿದ್ದ ಸುಲ್ತಾನನಿಗೆ ಬುದ್ಧಿ ಭ್ರಮಣೆಯಾದಂತಾಗಿ ಇನ್ನೂ ಅನೇಕ ಅಧಿಕಾರಿಗಳಿಗೆ ಮರಣದಂಡನೆ ವಿಧಿಸಿದ. ಅವರಲ್ಲಿ ಮುಖ್ಯವಾಗಿ ಅಚ್ಚಣ್ಣ ಪಂಡಿತನೆಂಬುವನ ಸಮೀಪದ ಬಂಧುವಾಗಿದ್ದ ಜೋಗೀ ಪಂಡಿತ, ಬೆಂಗಳೂರು ಪ್ರಾಂತದ ಶಿರಸ್ತೇದಾರ ಆರ್ಕಾಟಿನ ರಾಜ ರಾಮಚಂದ್ರ ಫಡಕೆ ಹಾಗೂ ರಾಯದುರ್ಗ ಮತ್ತು ಹರಪನಹಳ್ಳಿ ಪಾಳೆಯಗಾರರೂ ಈ ಪಟ್ಟಿಯಲ್ಲಿದ್ದರು. ಈ ರೀತಿ ಬ್ರಿಟಿಷ್ ಆಡಳಿತದ ಪ್ರಾರಂಭಿಕ ಹಂತದಲ್ಲಿ ಈ ಸ್ಥಳದಲ್ಲಿ ಯುದ್ಧ ನಡೆಯಿತು.

ಅಲ್ಲಿಂದ ಬರೋಬ್ಬರಿ ಎರಡು ಶತಮಾನ ಯಾವುದೇ ಹೋರಾಟಗಳಲ್ಲಾಗಲಿ, ಯುದ್ಧದಲ್ಲಾಗಲಿ ಉಲ್ಲೇಖಗಳು ಕಂಡುಬರುವುದೇ ಇಲ್ಲ. ಆನಂತರ ಮೊದಲಿಗೆ ಈ ಸ್ಥಳ ಮತ್ತೆ ಮುನ್ನೆಲೆಗೆ ಬಂದದ್ದು ಬ್ರಿಟಿಷ್ ಆಡಳಿತದ ಕೊನೆಯ ಚರಣದಲ್ಲೆ.



**ಬೆಂಗಳೂರನ್ನು ವಶಪಡಿಸಿಕೊಂಡಿದ್ದರ ಗುರುತಿಗೆ ಬ್ರಿಟಿಷರು ಅಳವಡಿಸಿರುವ ಫಲಕ**

## ರಾಷ್ಟ್ರೀಯ ಜಾಗೃತಿಯತ್ತ ಚಿತ್ತ

ಮೈಸೂರಿನ ಸಂಸ್ಥಾನದಲ್ಲಿನ ರಾಷ್ಟ್ರೀಯ ಚಳವಳಿಯು ಕರ್ನಾಟಕದ ಮತ್ತು ದೇಶದ ಬ್ರಿಟಿಷ್ ಸಂಸ್ಥಾನಗಳಲ್ಲಿ ನಡೆದ ಚಳವಳಿಗಿಂತ ಪ್ರತ್ಯೇಕ ಸ್ವರೂಪದ್ದು. ೧೯೦೬–೦೭ ರಲ್ಲಿ ಬ್ರಿಟಿಷ್ ಭಾಗಗಳಲ್ಲಿ ಸ್ವದೇಶೀ ಚಳವಳಿ, ೧೯೨೧–೨೨ರಲ್ಲಿ ನಡೆದ ಅಸಹಕಾರ ಚಳವಳಿ ಮತ್ತು ೧೯೩೦–೩೪ರಲ್ಲಿನ ಕಾನೂನುಭಂಗ ಚಳವಳಿ ಈ ಸಂಸ್ಥಾನದಲ್ಲಿ ನಡೆದಿರಲಿಲ್ಲ. ಪಾಶ್ಚಾತ್ಯ ಶಿಕ್ಷಣ ಪಡೆದ ನವ ವಿದ್ಯಾವಂತರಲ್ಲಿ ತಮ್ಮ ಸ್ವಾತಂತ್ರ್ಯದ ಬಗ್ಗೆ ಅರಿವು ನಿಧಾನವಾಗಿ ಮೂಡತೊಡಗಿತು. ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿಯಿಂದ ಬೆಂಗಳೂರಿನ ಹಲವು ಸಾವಿರ ನೇಕಾರರೂ ಅವರ ೪–೫ ಪಟ್ಟು ನೂಲುವ ಸ್ತ್ರೀಯರೂ ಉದ್ಯೋಗ ಕಳೆದುಕೊಂಡರು. ಮಹಿಳೆಯರು ತಮ್ಮ ದುಡಿಮೆ ಕಳೆದುಕೊಂಡು



ಸಾಮಾಜಿಕವಾಗಿಯೂ ತಮ್ಮ ಸ್ಥಾನ ಮಾನಗಳಿಗೆ ಎರವಾಗುವಂತಾಯಿತು. ಗೋಣಿ ನೇಯುವ ಗೋಣಿಗರೂ ಅದೇ ರೀತಿ ನಿರುದ್ಯೋಗಿಗಳಾದರು. ಯಂತ್ರ ನಿರ್ಮಿತ ರಗ್‌ಗಳ ಸ್ಪರ್ಧೆಯಿಂದ ಸ್ಥಳೀಯ ಕಂಬಳಿ ನೇಯ್ದೆಗೂ ಬಹಳ ಹಿನ್ನಡೆ ಆಯಿತು. ಉಪ್ಪಿನ ಮೇಲೆ ಹೇರಿದ ತೆರಿಗೆ ಹಾಗೂ ಉಪ್ಪಿನ ಉತ್ಪಾದನೆ ಸರ್ಕಾರಿ ಗುತ್ತಿಗೆಯಾದದ್ದು ಉಪ್ಪಾರರಿಗೂ ಭಾರಿ ಹೊಡೆತ ಕೊಟ್ಟಿತು. ಈಗಿನ ವೈಟ್‌ಫೀಲ್ಡ್ ಪ್ರದೇಶದಲ್ಲಿ ಕಲ್ಲುಪ್ಪಿನ ಉತ್ಪಾದನೆ, ಭಾರೀ ಪ್ರಮಾಣದಲ್ಲಿ ಎಣ್ಣೆ ಉತ್ಪಾದಿಸುವ ಮೋಚಿಗಳೂ, ಬಹುಮಟ್ಟಿಗೆ ಗಾಣಿಗರೂ ಸೊರಗಿದರು. ಇನಾಮೆಲ್, ಪೋರ್ಸೆಲೀನ್‌ನಂಥ ಅಗ್ಗದ, ನಾಜೂಕಿನ ಪಾತ್ರೆಗಳು ಬಂದಾಗ ಕುಂಬಾರರೂ, ಕಂಚುಗಾರರೂ ಹಾನಿಗೊಳಗಾದರು. ರಬ್ಬರ್ ಬಳಕೆಗೆ ಬಂದಾಗ ಚಪ್ಪಲಿ ಹೊಲಿಯುವವರು ನಿರಾಧಾರವಾದರು. ನಿರುದ್ಯೋಗ ಇನ್ನೂ ಅನೇಕ ವೃತ್ತಿಯವರನ್ನು ಕಾಡಿತು.

ಇದೇ ಕಾಲಕ್ಕೆ ಕ್ರಿಶ್ಚಿಯನ್ ಮಿಷನರಿಗಳು ನಡೆಸಿದ ಹಿಂದೂ ಧರ್ಮದ ಬಗೆಗಿನ ಟೀಕೆಯೂ ಜನರ ಮನಸ್ಸನ್ನು ನೋಯಿಸಿತು. ವಿದೇಶೀ ಸರಕಾರದ ಕೈಗಾರಿಕಾ ನೀತಿ, ತೆರಿಗೆ, ಧಾರ್ಮಿಕ ನಿಲುವುಗಳಿಂದ ಆದ ಅಸಮಾಧಾನ. ಇದೆಲ್ಲ ಕಾರಣಗಳಿಂದಾಗಿ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ ಆರಂಭವಾಯಿತು.

ನೆರೆಯ ಬ್ರಿಟಿಷ್ ಪ್ರಾಂತ್ಯವಾದ ಮದ್ರಾಸ್, ಬೊಂಬಾಯಿಗಳಲ್ಲಿ ಇದ್ದ ಸವಲತ್ತುಗಳೂ ಸಂಸ್ಥಾನದಲ್ಲಿ ತಮಗಿಲ್ಲವೆಂಬುದರ ಅರಿವಾಯಿತು. ಪ್ರಜಾಪ್ರತಿನಿಧಿ ಸಭೆ ಎಂಬ ವ್ಯವಸ್ಥೆಯೇನೋ ಇತ್ತು. ಆದರೆ ಸರ್ಕಾರ ಒಪ್ಪುವ ಠರಾವುಗಳನ್ನು ಸ್ವೀಕರಿಸುವ ಹಕ್ಕು ಮಾತ್ರವೇ ಪ್ರಜಾಪ್ರತಿನಿಧಿ ಸಭೆಗೆ ಇತ್ತು. ದಿವಾನರೇ ಅಧ್ಯಕ್ಷರಾಗಿರುವ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಿಗೆ ದಿವಾನರೇ ಮುಖ್ಯಸ್ಥರಾಗಿರುವ ಕೌನ್ಸಿಲ್‌ನ ಮೇಲೆ ಯಾವುದೇ ಒತ್ತಾಯ ತರುವ ಅವಕಾಶವಿರಲಿಲ್ಲ. ಅರ್ಥಾತ್ ದಿವಾನರ ಸಲಹಾ ಮಂಡಳಿಯು ಪ್ರಜಾಪ್ರತಿನಿಧಿ ಸಭೆಗಾಗಲೀ ಅವರು ಪ್ರತಿನಿಧಿಸುವ ಜನರಿಗಾಗಲೀ ಜವಾಬ್ದಾರ (ರೆಸ್ಪಾನ್ಸಿಬಲ್) ಸಂಸ್ಥೆ ಆಗಿರಲಿಲ್ಲ. ಇದಕ್ಕಾಗಿಯೇ ನಡೆದದ್ದು ಜವಾಬ್ದಾರಿ ಸರ್ಕಾರಕ್ಕೆ ಆಗ್ರಹಿಸಿ ಚಳವಳಿ.

## ಜವಾಬ್ದಾರಿ ಸರ್ಕಾರಕ್ಕಾಗಿ ಚಳವಳಿ

ಮಹಾರಾಜರುಗಳು ಆಳುತ್ತಿದ್ದ ಸಂಸ್ಥಾನೀ ಪ್ರದೇಶಗಳಲ್ಲಿ ಯಾವುದೇ ಕಾನೂನು ಭಂಗ ಚಳವಳಿ ಮಾಡಬಾರದು, ಬ್ರಿಟಿಷರ ನೇರ ಆಡಳಿತಕ್ಕೆ ಒಳಪಟ್ಟ ಪ್ರದೇಶಗಳಲ್ಲಿ ಮಾತ್ರ ಕಾಂಗ್ರೆಸ್ ಸೂಚಿಸಿದಾಗ ಚಳವಳಿ ಮಾಡಬೇಕು ಎಂಬುದು ಗಾಂಧೀಜಿಯವರ ಆದೇಶವಾಗಿತ್ತು. ಹಾಗಾಗಿ ಅನೇಕ ವರ್ಷಗಳವರೆಗೂ ಮೈಸೂರು ಸಂಸ್ಥಾನದಲ್ಲಿ ಹೇಳಿಕೊಳ್ಳುವಂತಹ ಹೋರಾಟಗಳು ನಡೆಯಲಿಲ್ಲ. ೧೯೨೧ರ ಜನವರಿ ೧ರಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ (ಕೆಪಿಸಿಸಿ) ಸ್ಥಾಪನೆ ಆದಾಗ ಮೈಸೂರು ಸಂಸ್ಥಾನವನ್ನು ಒಂದು ಜಿಲ್ಲೆಯಾಗಿ ಪರಿಗಣಿಸಿ ನಿವೃತ್ತ ಜಸ್ಟಿಸ್ ಎಸ್.ಎಸ್. ಸೆಟ್ಟರ್ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ಸ್ಥಾಪಿಸಲಾಯಿತು. ಖಾದೀ ಪ್ರಚಾರ, ಅಸ್ಪೃಶ್ಯತಾ ನಿವಾರಣೆ, ಗೋಹತ್ಯಾ ಪ್ರತಿಬಂಧ, ಹಿಂದೀ ಪ್ರಚಾರ ಮುಂತಾದ ರಚನಾತ್ಮಕ ಚಟುವಟಿಕೆಗಳನ್ನಷ್ಟೇ ಮಾಡಲು ಕಾಂಗ್ರೆಸ್ ಕಮಿಟಿಗಳಿಗೆ ಆದೇಶ ನೀಡಲಾಗಿತ್ತು. ಕೆ. ಜೀವಣ್ಣರಾವ್, ರಾಜಗೋಪಾಲಾಚಾರ್ ಮುಂತಾದವರು ೧೯೨೩ರಲ್ಲಿ ನಾಗಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹಕ್ಕೆ ಬೆಂಗಳೂರಿನಿಂದ ಕೆಲವರು ತೆರಳಿ ಶಿಕ್ಷೆಗೊಳಗಾಗಿ ಬಂದಿದ್ದರು. ತರುಣರು ಸೇರಿಕೊಂಡು ೧೯೨೩ರಲ್ಲಿ ಡಾ. ಹರ್ಡೀಕರ್ ಮಂಜಪ್ಪ ಅವರ ಹಿಂದೂಸ್ಥಾನೀ ಸೇವಾದಳ ಸ್ಥಾಪಿಸಲಾಯಿತು. ಅದರ ಒಂದು ಶಾಖೆ ನ್ಯಾಷನಲ್ ಹೈಸ್ಕೂಲಲ್ಲೂ ಆರಂಭವಾಗಿ ಇಲ್ಲಿಂದ ಒಂದು ಸ್ವಯಂಸೇವಕರ ತುಕಡಿ ಚೆನ್ನಾಗಿ ತರಬೇತಿ ಪಡೆದು ೧೯೨೪ರಲ್ಲಿ ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಹೋಗಿ, ಅಲ್ಲಿ ಕೆಲಸ ಮಾಡಿತ್ತು.

ನೆಹರೂ ಜತೆ ರಾಜ್ಯ ಕಾಂಗ್ರೆಸ್ ಸಮಾಲೋಚನೆ ನಡೆಸಿತು. ಭವಿಷ್ಯದಲ್ಲಿ ಅಂದರೆ ೧೯೩೮ರಲ್ಲಿ ಸ್ಥಾಪನೆಯಾದ ಮೈಸೂರು ಕಾಂಗ್ರೆಸ್‌ನ ಪ್ರಥಮ ಅಧ್ಯಕ್ಷರಾದ ಟಿ.ಸಿದ್ದಲಿಂಗಯ್ಯ ಅವರ ನೇತೃತ್ವದಲ್ಲಿ ತಗಡೂರು ರಾಮಚಂದ್ರರಾಯರು ಮತ್ತು ವೀರಕೇಸರಿ ಸೀತಾರಾಮ ಶಾಸ್ತ್ರಿಗಳನ್ನು ಒಳಗೊಂಡ ಕ್ರಿಯಾ ಸಮಿತಿಯನ್ನು ನೇಮಿಸಲಾಯಿತು. ಸಮಿತಿ ಸಂಸ್ಥಾನದಲ್ಲಿ ಐದಾರು ವಾರ ಸಂಚರಿಸಿತು. ಅದು ಜವಾಬ್ದಾರಿ ಸರಕಾರದ ಬಗ್ಗೆ ತೀವ್ರ ಪ್ರಚಾರ ನಡೆಸಿತು.



ಆದರೆ ಜವಾಬ್ದಾರಿ ಸರಕಾರದ ಬೇಡಿಕೆಯ ಬಗ್ಗೆ ಮಹಾರಾಜರಿಗಾಗಲೀ ದಿವಾನ್ ಮಿರ್ಜಾ ಅವರಿಗಾಗಲೀ ಯಾವ ಸಮಾಧಾನವೂ ಇರಲಿಲ್ಲ. ನೆರೆಯ ಪ್ರಾಂತ್ಯಗಳಿಂದ ಗಾನಾಲ ರಾಮಮೂರ್ತಿ, 'ಸಂಗೂ' ಸುಬ್ರಹ್ಮಣ್ಯಂ, ಎಸ್. ಸತ್ಯಮೂರ್ತಿ, ಚಕ್ರವರ್ತಿ ರಾಜಗೋಪಾಲಾಚಾರಿ, ಕಾರ್ನಾಡ್ ಸದಾಶಿವರಾವ್, ಗಂಗಾಧರರಾವ್ ದೇಶಪಾಂಡೆ, ಕಡಪಾ ರಾಘವೇಂದ್ರರಾವ್, ಮುದವೀಡು ಕೃಷ್ಣರಾವ್ ಮುಂತಾದ ನಾಯಕರು ಕಾಂಗ್ರೆಸ್ ಪರ ಬೆಂಗಳೂರಿಗೆ ಬಂದು ಭಾಷಣ ಮಾಡುತ್ತಿದ್ದರು. ಜನಜಂಗುಳಿ ನೆರೆಯುತ್ತಿದ್ದರು ಎಂಬ ಕಾರಣಕ್ಕೆ ಚಾಮರಾಜಪೇಟೆಯ 'ಗಾಂಧೀ ಮೈದಾನ' ಎಂದು ಪ್ರಸಿದ್ಧವಾದ ನಿವೇಶನವನ್ನು ದಿವಾನರು ಹಲವು ಸಂಸ್ಥೆಗಳಿಗೆ ಹಂಚಿದರು. ಆದರೇನಂತೆ? ಊರಿಗೆಲ್ಲ ಒಂದೇ ಮೈದಾನವಲ್ಲವಲ್ಲ? ಧರ್ಮಾಂಬುಧಿ ಕೆರೆ (ಈಗಿನ ಮೆಜೆಸ್ಟಿಕ್ ಬಸ್ ನಿಲ್ದಾಣ), ಬನಪ್ಪ ಪಾರ್ಕ್, ಚಿಕ್ಕ ಲಾಲ್‌ಬಾಗ್, ನ್ಯಾಷನಲ್ ಹೈಸ್ಕೂಲು ಮೈದಾನ ಇಲ್ಲೆಲ್ಲ ಸಭೆ ಸಮಾರಂಭಗಳು ಸಾಗಿದವು. ಜನಜಾಗೃತಿ ನಿರಂತರ ಆಯಿತು.

ಈ ಸಮಯದಲ್ಲಿ ದಿವಾನ್ ಮಿರ್ಜಾ ಅವರ ಪಾತ್ರದ್ದೇ ಚರ್ಚಾಸ್ಪದ ವಿಷಯ. ೧೯೨೬ರ ಮೇ ಒಂದರಂದು ಅಲ್ಬೆಯಾನ್ ಬ್ಯಾನರ್ಜಿಯವರು ದಿವಾನ್ ಪದವಿಯಿಂದ ನಿವೃತ್ತರಾದ ನಂತರ ಮಿರ್ಜಾ ಇಸ್ಮಾಯಿಲ್‌ರವರು ದಿವಾನರಾಗಿ ನೇಮಕಗೊಂಡರು. ಮಿರ್ಜಾ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಸಹಪಾಠಿಗಳು. ಮಿರ್ಜಾರವರ ತಾತ ಆಲಿ ಅಸ್ಕರ್‌ರವರು ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಬಹಳ ಆಪ್ತರಾಗಿದ್ದರು. ಈ ವಿಷಯವೂ ಮಿರ್ಜಾ ಅವರಿಗೆ ತುಸು ಹೆಚ್ಚು ಅಧಿಕಾರ ಚಲಾಯಿಸಲು ಅವಕಾಶ ಮಾಡಿಕೊಟ್ಟಿತು. ಜವಾಬ್ದಾರಿ ಸರ್ಕಾರಕ್ಕೆ ಹೋರಾಡುತ್ತಿದ್ದವರನ್ನು ಕಂಡರೆ ಮಿರ್ಜಾ ಅವರಿಗೆ ಅಷ್ಟಕ್ಕಷ್ಟೆ. ಹೋರಾಟಗಾರರ ಕುರಿತು ಜೂನ್ ೧೫ರಂದು ರಾಮನಗರದ ಸಭೆಯೊಂದರಲ್ಲಿ ಮಿರ್ಜಾ ಅವರು ತಮ್ಮ ಅಸಮಾಧಾನವನ್ನು ಬಹಿರಂಗಗೊಳಿಸಿದರು.



**ದಿವಾನ್ ಮಿರ್ಜಾ ಇಸ್ಮಾಯಿಲ್**

"ಜರ್ಮನಿಯಲ್ಲಿ ಹಿಟ್ಲರ್, ಇಟಲಿಯಲ್ಲಿ ಮುಸ್ಸೊಲಿನಿ, ರಷ್ಯಾದಲ್ಲಿ ಸ್ಟಾಲಿನ್‌ನಂಥ ಸರ್ವಾಧಿಕಾರಿಗಳು ಅಧಿಕಾರಕ್ಕೆ ಬಂದಿದ್ದಾರೆ. ಪ್ರಜಾತಂತ್ರ ಹುಟ್ಟಿದ ನಾಡಾದ ಯೂರೋಪ್‌ನಲ್ಲೇ ಅದು ಕಣ್ಮರೆಯಾಗುತ್ತಿದೆ. ಇಂಥ ಕಾಲದಲ್ಲಿ ನಮ್ಮ ಕೆಲವು ನಾಯಕರಿಗೆ ಜವಾಬ್ದಾರಿ ಸರ್ಕಾರ, ಪ್ರಜಾತಂತ್ರ ಬೇಕು. ಇದು ಎಂಥ ವಿಪರ್ಯಾಸ" ಎಂದಿದ್ದರು.

ಈಗ ಮತ್ತೆ ಟಿ. ಸಿದ್ದಲಿಂಗಯ್ಯ ಅವರ ಅಧ್ಯಕ್ಷತೆಯ ಕ್ರಿಯಾ ಸಮಿತಿ ವಿಷಯಕ್ಕೆ ಬರೋಣ. ೧೯೩೭ರ ಅಕ್ಟೋಬರ್ ೧೦ರಂದು ಕ್ರಿಯಾ ಸಮಿತಿ ಸದಸ್ಯರನ್ನು ಬಂಧಿಸಿ ಒಂದು ವರ್ಷ ಶಿಕ್ಷೆಗೆ ಒಳಪಡಿಸಲಾಯಿತು. ತಮಗೆ ಒದಗಿಸಿದ ಜಾಮೀನಿನ ಸವಲತ್ತನ್ನು ಈ ನಾಯಕರು ನಿರಾಕರಿಸಿ ಶಿಕ್ಷೆಯನ್ನು ಅನುಭವಿಸಿದರು. ದಸರಾಕಾಲದ ಪ್ರಜಾಪ್ರತಿನಿಧಿ ಸಭೆ ನಡೆಯಬೇಕಾಗಿದ್ದ ಸಂದರ್ಭದಲ್ಲಿ, ಅಕ್ಟೋಬರ್ ೧೫ರ ರಾತ್ರಿ ಕಾಂಗ್ರೆಸ್ ಪ್ರತಿನಿಧಿಗಳ ನಾಯಕರಾದ ಭಾಷ್ಯಂ ಅವರನ್ನು ಬಂಧಿಸಲಾಯಿತು. ಇದೇ ರೀತಿ ಕೋಲಾರದ ಎನ್.ಸಿ. ತಿಮ್ಮಾರೆಡ್ಡಿ ಎಂಬ ನಾಯಕರನ್ನೂ ಬಂಧಿಸಿದರು. ವಾತಾವರಣ ತೀರ ಉದ್ವಿಗ್ನವಾಯಿತು.

ಅಕ್ಟೋಬರ್ ೧೬ರಂದು ಪ್ರಜಾಪ್ರತಿನಿಧಿ ಸಭೆಯ ಅಧಿವೇಶನಕ್ಕೆ ಬಂದಿದ್ದ



ಸಂಯುಕ್ತ ಪ್ರಜಾಪಕ್ಷದ ಸದಸ್ಯರು ವಿ. ವೆಂಕಟಪ್ಪ ಅವರ ಅಧ್ಯಕ್ಷತೆಯಲ್ಲಿ ಮೈಸೂರಲ್ಲೇ ಸಭೆ ಸೇರಿ ಕಾಂಗ್ರೆಸ್ ಜತೆ ವಿಲೀನವಾಗಲು ನಿರ್ಧರಿಸಿ ಮೈಸೂರು ಕಾಂಗ್ರೆಸ್ ಎಂಬ ಪಕ್ಷ ರಚಿಸಿದರು. ಆಗ, ಪ್ರಜಾಪ್ರತಿನಿಧಿ ಸಭೆಯಲ್ಲಿ ಕಾಂಗ್ರೆಸ್ಸಿನ ಸದಸ್ಯ ಬಲ ೩೯ರಿಂದ ೧೩೦ ಆಯಿತು. ಈ ಕಾಂಗ್ರೆಸ್ ಸದಸ್ಯರು ೧೯೩೭ರ ಅಕ್ಟೋಬರ್ ೧೯ರಂದು ಪ್ರಜಾಪ್ರತಿನಿಧಿ ಸಭೆಯಲ್ಲಿ ಸರ್ಕಾರದ ಕ್ರಮಗಳನ್ನು ಪ್ರತಿಭಟಿಸಿ 'ವಾಕ್‌ಔಟ್' ಮಾಡಿದರು. ವಾತಾವರಣದಲ್ಲಿ ಬಿಸಿ ಏರುತ್ತ ಹೋಯಿತು.



**ಕೆ.ಎಫ್. ನಾರಿಮನ್**

ಇಷ್ಟೆಲ್ಲ ನಡೆಯುತ್ತಿರುವ ವೇಳೆಯಲ್ಲೆ ಅಕ್ಟೋಬರ್ ೨೪ಕ್ಕೆ ನಾರಿಮನ್ ಬೆಂಗಳೂರಿಗೆ ಬಂದರು, ಮೇಲೆ ತಿಳಿಸಿದ ಗೋಲಿಬಾರ್ ಘಟನೆ ನಡೆದೇ ಹೋಯಿತು. ಗೋಲಿಬಾರ್ ನಡೆದು ಒಬ್ಬ ವ್ಯಕ್ತಿ ನಿಧನನಾದರೂ ಹೋರಾಟದಿಂದ ಹಿಂದೆ ಸರಿಯಲು ಜನರು ಒಪ್ಪಲಿಲ್ಲ. ಮಾರನೆಯ ದಿನವೇ ಅಂದರೆ ಅಕ್ಟೋಬರ್ ೨೫ರಂದು ಬೃಹತ್ ಸಂಖ್ಯೆಯ ಪ್ರತಿಭಟನಾಕಾರರು ಮೈಸೂರು ಬ್ಯಾಂಕ್ ಬಳಿ ಸಭೆ ಸೇರಿದರು. ಸಮೀಪದಲ್ಲಿ ಜಿಲ್ಲಾ ಕಚೇರಿಗಳ ಒಳಗೆ ಇದ್ದ ಪೊಲೀಸ್ ಠಾಣೆಯ ಮೇಲೆ ಉದ್ರಿಕ್ತರ ಗುಂಪು ಕಲ್ಲುತೂರಲು ಆರಂಭಿಸಿತು. ಒಬ್ಬ ಹೋರಾಟಗಾರನಂತೂ ಪೊಲೀಸ್ ಕಾನ್ಸ್‌ಟೇಬಲ್ ಅನ್ನು

ಚಾಕುವಿನಿಂದ ಇರಿಯಲು ಮುಂದಾದ. ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ನಡೆಸಿದ ಗೋಲಿಬಾರ್‌ನಲ್ಲಿ ಅಣ್ಣಯಪ್ಪ ಮತ್ತು ಗುಂಡಪ್ಪ ಎಂಬ ಇಬ್ಬರು ಸ್ಥಳದಲ್ಲಿಯೇ ಪ್ರಾಣಾರ್ಪಣೆ ಮಾಡಿದರು.

ಮುಂದಿನ ದಿನಗಳಲ್ಲಿ ಈ ಕುರಿತು ಮಾತನಾಡಿದ ಮಿರ್ಜಾ ಅವರು, "ಬೊಂಬಾಯಿಯ ಓರ್ವ ರಾಜಕೀಯ ಚಳುವಳಿಗಾರ ಕಾಂಗ್ರೆಸ್ಸಿನ ಅಸಹಕಾರ ಚಳುವಳಿ ನಡೆಯುತ್ತಿದ್ದ ಕಾಲದಲ್ಲಿ ಬೆಂಗಳೂರಿಗೆ ಬಂದು ನಮಗೆ ತುಂಬಾ ತೊಂದರೆ ಉಂಟುಮಾಡಿದ. ಇದರ ಪರಿಣಾಮವಾಗಿ ಜನರ ಗುಂಪನ್ನು ಹತೋಟಿಯಲ್ಲಿಡಲು ಪೋಲಿಸರು ಗುಂಡು ಹಾರಿಸುವುದು ಅನಿವಾರ್ಯ ವಾಯಿತು" ಎಂದು ನಾರಿಮನ್ ಅವರನ್ನು ಕುರಿತು ಹೇಳಿದರು. ಮಿರ್ಜಾ ಅವರ ಇಂತಹ ಮಾತುಗಳನ್ನು ಕೇಳಿಸಿಕೊಂಡಿದ್ದ ನಾರಿಮನ್ ಅವರು 'ದಕ್ಷಿಣ ಭಾರತದ ಪುಟ್ಟ ಮೊಗಲ್' ಎಂದು ಮಿರ್ಜಾ ಅವರಿಗೆ 'ಬಿರುದು' ನೀಡಿದ್ದರು!

## ಗುಂಡೇಟು ತಿಂದಿದ್ದ ದೇವುಡು

ದೇವುಡು ಎಂದೇ ಖ್ಯಾತರಾದ ದೇವುಡು ನರಸಿಂಹ ಶಾಸ್ತ್ರಿಯವರು ಕನ್ನಡದ ಖ್ಯಾತ ವಿದ್ವಾಂಸ ಮತ್ತು ಸಾಹಿತಿಗಳಲ್ಲೊಬ್ಬರು. ಅವರು ಅನೇಕ ಐತಿಹಾಸಿಕ, ಪೌರಾಣಿಕ ಮತ್ತು ಸಾಮಾಜಿಕ ಕಾದಂಬರಿಗಳನ್ನು ಬರೆದಿದ್ದಾರೆ. ಅವರ 'ಮಹಾಕ್ಷತ್ರಿಯ' ಕಾದಂಬರಿಗಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ



ದೇವುಡು ನರಸಿಂಹಶಾಸ್ತ್ರಿ



ದೊರೆತಿದೆ. ಸಾಹಿತ್ಯ ಕ್ಷೇತ್ರವಷ್ಟೆ ಅಲ್ಲದೆ, ಗಾಂಧೀಜಿ ಪ್ರಭಾವಕ್ಕೊಳಗಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗಿಯಾದರು. ೧೯೩೬ರಲ್ಲಿ ಗಾಂಧೀಜಿ ಅವರು ನಾಲ್ವಡಿ ಕೃಷ್ಣರಾಜ ಒಡೆಯರ ಆಹ್ವಾನದ ಮೇಲೆ ಬೆಂಗಳೂರಿಗೆ ಬಂದಾಗ ಗಾಂಧೀಜಿಯವರ ಬಿಡಾರದಲ್ಲಿ ಸ್ವಯಂಸೇವಕರ ಮೇಲ್ವಿಚಾರಣೆ ಕಾರ್ಯ ನಿರ್ವಹಿಸಿದರು. ಅವರ ಕೈಕೆಳಗಿನ ಸ್ವಯಂಸೇವಕರಲ್ಲಿ ನ್ಯಾಷನಲ್ ಕಾಲೇಜಿನ ಡಾ. ಎಚ್. ನರಸಿಂಹಯ್ಯನವರೂ ಒಬ್ಬರು.

ರಾಜಕೀಯ ಚಳವಳಿಗಳ ಸಭೆಗಳಲ್ಲಿ ಗುಂಡೇಟಿಗೂ ಜಗ್ಗದೆ ದೇವುಡು ಭಾಗವಹಿಸುತ್ತಿದ್ದರು. ನಾರಿಮನ್ ಗಲಾಟೆ ನಂತರ ಗೋಲಿಬಾರ್ ನಡೆದಾಗ ಅನೇಕರು ಗಾಯಗೊಂಡಿದ್ದರು. ಅವರಲ್ಲಿ ದೇವುಡು ಸಹ ಒಬ್ಬರು. ೧೯೪೨ರ ಕ್ವಿಟ್ ಇಂಡಿಯಾ ಚಳವಳಿಯ ಮೆರವಣಿಗೆಯಲ್ಲಿ ಪೋಲಿಸರನ್ನು ಪ್ರತಿಭಟಿಸಿ ಮುನ್ನುಗ್ಗಿ ಲಾಠಿ ಏಟು ತಿಂದು ಒಂದು ತಿಂಗಳು ನೋವಿನಲ್ಲಿ ನರಳಿದರು.

ವಿದ್ಯಾರ್ಥಿಗಳ ಚಳವಳಿಯಲ್ಲಿ ದೇವುಡು ಅವರು ಭಾಗವಹಿಸಿದ್ದರು. ವಿದ್ಯಾರ್ಥಿಗಳ ಮೇಲೆ ಪೊಲೀಸರು ಗುಂಡು ಹಾರಿಸಲು ಹೊರಟಾಗ, 'ಅವರನ್ನು ಹೊಡೆಯುವ ಮೊದಲು ನನ್ನನ್ನು ಗುಂಡಿಟ್ಟು ಕೊಲ್ಲಿ' ಎಂದು ಘರ್ಜಿಸಿದವರು.

ಸ್ವಾತಂತ್ರ್ಯ ಹೋರಾಟದಲ್ಲಿ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಪಾಲ್ಗೊಂಡವರಲ್ಲಿ ದೇವುಡು ಅವರು ಅಗ್ರಗಣ್ಯರು. ಒಮ್ಮೆ ಕೆಂಗಲ್ ಹನುಮಂತಯ್ಯನವರು, 'ನೀವು ದೇಶಕ್ಕಾಗಿ ಸಲ್ಲಿಸಿದ ಸೇವೆಗಾಗಿ ಸರ್ಕಾರದಿಂದ ಪೆನ್ಷನ್ ಹಾಗೂ ಒಂದು ಸೈಟ್ ಕೊಡಿಸ್ತೀನಿ' ಎಂದರಂತೆ. ಅದಕ್ಕೆ ದೇವುಡು ಉತ್ತರಿಸಿದ್ದು, "ಗಾಂಧೀ ಅವರ ನೇರ ಸ್ಫೂರ್ತಿಯಿಂದ ಭಾರತದ ಸ್ವಾತಂತ್ರಕ್ಕಾಗಿ ನನ್ನ ಅಳಿಲುಸೇವೆ ಸಲ್ಲಿಸಿದೆ. ಪೆನ್ಷನ್, ಸೈಟು ಪ್ರಶಸ್ತಿಗಳು ಸಿಗಲಿ ಅಂತಲ್ಲ. ಅವು ಯಾವುವೂ ನನಗೆ ಬೇಕಿಲ್ಲ" ಎಂದು. ಮಿರ್ಜಾ ಇಸ್ಮಾಯಿಲ್ ಅವರು ದೇವುಡು ಅವರ ಪ್ರಭಾವ, ಪ್ರತಿಭಟನೆ ತಾಳಲಾರದೆ "ನೀವು ರಾಜಕಾರಣದಿಂದ ನಿವೃತ್ತರಾಗುವುದಾದರೆ ಸರ್ಕಾರದಿಂದ ಪ್ರತಿ ತಿಂಗಳೂ ನೂರು ರೂಪಾಯಿ ನಿವೃತ್ತಿ ವೇತನ ಮಂಜೂರು ಮಾಡುತ್ತೇನೆ" ಎಂದರಂತೆ. ಆಗ ದೇವುಡು, "ಕ್ಷಮಿಸಿ, ನೀವು ನನ್ನ ಬೆಲೆ ಎಷ್ಟೆಂದು ತಿಳಿದುಕೊಳ್ಳಲಿಲ್ಲ" ಎಂದರಂತೆ.



**ಕಲಾವಿದನ ಕಣ್ಣಲ್ಲಿ ಬೆಂಗಳೂರು ಪೇಟೆ. ಕೃಪೆ: ಬೆಂಗಳೂರು ದರ್ಶನ**

## ಮಹಾರಾಜರಿಗೇ ಆಹ್ವಾನ

ಅಂದಿನ ಹೋರಾಟಗಾರರ ಮನಸ್ಸು ಎಷ್ಟರ ಮಟ್ಟಿಗೆ ಹಾತೊರೆಯುತ್ತಿತ್ತು, ತಮ್ಮ ಸ್ವಂತದ್ದನ್ನು ಎಷ್ಟು ತ್ಯಾಗ ಮಾಡಿದರು ಎಂಬುದಕ್ಕೆ ಒಂದು ಉದಾಹರಣೆ ಇಲ್ಲಿದೆ.

ಜವಾಬ್ದಾರಿ ಸರ್ಕಾರಕ್ಕಾಗಿ ಚಳವಳಿ ನಡೆಯುತ್ತಿದ್ದಾಗ ಯಾರೋ ಒಬ್ಬರು ಒಂದಷ್ಟು ಹೋರಾಟಗಾರರಿಗೆ ಒಂದು ಲಕೋಟೆಯನ್ನು ತಂದುಕೊಟ್ಟರು. ಅದನ್ನು ತೆರೆದು ಓದಿದಾಗ, ಅದಾಗಲೇ ಬಂಧಿತರಾಗಿದ್ದ ಮೈಸೂರು ಕಾಂಗ್ರೆಸ್ ಅಧ್ಯಕ್ಷ ಟಿ. ತಾಳಕೆರೆ ಸುಬ್ರಹ್ಮಣ್ಯ ಅವರ ಒಂದು ಚೀಟಿ ಇತ್ತು. ಬ್ರಿಟಿಷ್ ಪ್ರಭುತ್ವದ ವಿರುದ್ಧದ ಹೋರಾಟದಲ್ಲಿ ಭಾಗವಹಿಸುವಂತೆ ಮಹಾರಾಜರಿಗೆ ಯಾರಾದರೂ ಕಾಂಗ್ರೆಸ್ ಪ್ರಮುಖರು ಪತ್ರ ಬರೆಯುವಂತೆ ಅದರಲ್ಲಿ ಸೂಚಿಸಿದ್ದರು. ಆದರೆ ಇದರ ನಂತರ ಆಗಬಹುದಾದ ಘನಘೋರ ಸ್ಥಿತಿಯನ್ನು ನೆನೆಸಿಕೊಂಡು ಯಾರೂ ಮುಂದೆ ಬರಲಿಲ್ಲ. ಕೊನೆಗೆ ಎನ್. ಕೇಶವ



ಅಯ್ಯಂಗಾರ್ ಅವರು ಉತ್ಸಾಹದಿಂದ ಒಪ್ಪಿದರು ಎಂದು ವಿ. ಎಸ್. ನಾರಾಯಣರಾವ್ ಅವರು ದಾಖಲಿಸಿದ್ದಾರೆ.

ಆಮೇಲೆ ಏನಾಯಿತು ಎಂದು ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂಪುಟ ೩ರ ೬೫೪ನೇ ಪುಟದಲ್ಲಿ ಸ್ವತಃ ಎನ್. ಕೇಶವ ಅಯ್ಯಂಗಾರ್ ಅವರೇ ಬರೆದಿರುವಂತೆ "ಕೂಡಲೇ ಜವಾಬ್ದಾರಿ ಸರ್ಕಾರವನ್ನು ಪ್ರಜೆಗಳಿಗೆ ದಯಪಾಲಿಸಿ ಬ್ರಿಟಿಷರನ್ನು ಭಾರತದಿಂದ ತೊಲಗಿಸುವ ಈ ಚಳವಳಿಯಲ್ಲಿ ತಾವೂ ಭಾಗವಹಿಸೋಣವಾಗಲಿ" ಎಂಬ ಆಶಯದ ಪತ್ರ ಮಹಾರಾಜರಿಗೆ ಬರೆದೆ. ಈ ಪತ್ರ ಸಹಿ ಮಾಡಿ ಕಳಿಸಿದರೆ ನಿಮ್ಮ ಬಂಧನ ಆಗುವುದು ಖಂಡಿತ, ನಿಮ್ಮ ಮನೆ, ಆಸ್ತಿ ಪಾಸ್ತಿ ಎಲ್ಲ ಜಪ್ತಾಗಬಹುದು ಎಂದು ಮುಂಜಾಗ್ರತೆಯಾಗಿ ನಾರಾಯಣರಾವ್ ಅವರು ನನ್ನನ್ನು ಎಚ್ಚರಿಸಿದರು. ತಕ್ಷಣ ನನ್ನ ವೃದ್ಧತಾಯಿ ಮತ್ತು ಚಿಕ್ಕಮ್ಮನನ್ನು ನನ್ನ ಗ್ರಾಮವಾದ ಶುದ್ಧಿ ಗುಂಟೆಗೆ ಬಿಟ್ಟುಬಂದೆ. ನನ್ನ ಅಣ್ಣನ ಹೆಸರಿನಲ್ಲಿದ್ದ ಮನೆಯನ್ನು ಭಾಗ ಮಾಡಿ ನನ್ನ ಹೆಸರಿಗೆ ಬಂದ ಪಾಲನ್ನು ಸರ್ಕಾರದವರು ಮುಟ್ಟುಗೋಲು ಹಾಕಿಕೊಳ್ಳದಂತೆ ೧೦,೦೦೦ ರೂ.ಗೆ ಮಾರಿದೆ. ಇಂದು (೧೯೮೦) ಅದರ ಬೆಲೆ ೫–೬ ಲಕ್ಷ ರೂ. ಆಗಬಹುದು. ಆದರೆ ಈ ಬಗ್ಗೆ ನನಗೆ ಸ್ವಲ್ಪವೂ ದುಃಖವಿಲ್ಲ" ಎಂದು ಹೇಳಿದ್ದಾರೆ. ಅವರು ಊಹಿಸಿದಂತೆಯೇ ಈ ಪತ್ರದ ನಂತರ ಅವರ ಬಂಧನವಾಗಿ ೧೯೪೨ರ ಆಗಸ್ಟ್ ೨೮ರಿಂದ ೧೯೪೩ರ ಏಪ್ರಿಲ್ ೧ರವರೆಗೆ ಬಂಧನದಲ್ಲಿದ್ದರು.

## ಹ್ಯಾಮಿಲ್ಟನ್ ಭವನ ಪ್ರಕರಣ

ಅದಾಗಲೇ ಸ್ವಾತಂತ್ರ್ಯ ಹೋರಾಟಗಾರರಿಗೆ ಸರ್ ಮಿರ್ಜಾ ಇಸ್ಮಾಯಿಲ್ ಅವರ ಬಗೆಗೆ ಅಸಮಾಧಾನ ಇತ್ತು. ಅದಕ್ಕೆ ತಕ್ಕಂತೆ ದಿವಾನರೂ ಯಾರ ಮಾತಿಗೂ ಕಿವಿಗೊಡದೆ ನಡೆಯುತ್ತಿದ್ದರು. ಮೈಸೂರಿನಲ್ಲಿ ಕೇಂದ್ರ ಪೊಲೀಸ್ ಠಾಣೆ ಇತ್ತು. ಹೋರಾಟಗಾರ ಎ.ಎನ್. ಸೂರ್ಯನಾರಾಯಣ ಅವರು ಭಾಷಣದಲ್ಲೊಮ್ಮೆ ಹೇಳಿದಂತೆ, "ಒಮ್ಮೆ ಸರ್ ಮಿರ್ಜಾ ಅವರು ಠಾಣೆಗೆ ಭೇಟಿ ನೀಡಿದರು. ಅಲ್ಲಿ ಕೆಲಸದವರು 'ಸೆಂಟ್ರಲ್ ಪೊಲೀಸ್' ಎಂದಷ್ಟೆ ಬರೆದಿದ್ದರು. ಸೆಂಟ್ರಲ್ ಪೊಲೀಸ್ ಸ್ಟೇಷನ್ ಎಂದು ಹೆಸರನ್ನು ಇನ್ನೇನು

ಮುಕ್ತಾಯಗೊಳಿಸುವ ಹಂತದಲ್ಲಿದ್ದರು. ಅದನ್ನು ಕಂಡ ದಿವಾನರು ಇಡೀ ಭವನಕ್ಕೆ 'ಹ್ಯಾಮಿಲ್ಟನ್ ಬಿಲ್ಡಿಂಗ್' ಎಂದು ಹೆಸರು ಬದಲಾಯಿಸುವಂತೆ ಸೂಚಿಸಿದರು. ಈ ಹೆಸರನ್ನು ಇಡಲು ಯಾವುದೇ ಕಾರಣಗಳು ಯಾರಿಗೂ ದೊರಕಲಿಲ್ಲ".

ನಾರಿಮನ್ ಪ್ರಕರಣ ನಡೆದ ಸಂದರ್ಭದಲ್ಲಿ ಮೈಸೂರು ರಾಜ್ಯದ ಪೊಲೀಸ್ ಮುಖ್ಯಸ್ಥರಾಗಿದ್ದವನು (ಐಜಿಪಿ) ಸರ್. ವಿಲಿಯಮ್ ಹ್ಯಾಮಿಲ್ಟನ್. ೧೯೩೦ರಲ್ಲಿ ಐಜಿಪಿ ಹುದ್ದೆಗೇರಿದ ಹ್ಯಾಮಿಲ್ಟನ್ ಸುದೀರ್ಘ ಅವಧಿಗೆ ಅಂದರೆ ೮ ವರ್ಷದವರೆಗೆ ಈ ಸ್ಥಾನದಲ್ಲಿದ್ದ. ಅಂದು ಬೆಂಗಳೂರಿನ ನಾರಿಮನ್ ಭಾಷಣದ ನಂತರ ಘಟನಾವಳಿಗಳಲ್ಲಿ ಪರಿಸ್ಥಿತಿ ನಿಯಂತ್ರಣ ತಪ್ಪಿ ಹೋಗುತ್ತದೆಂದು ತಿಳಿದು ಗೋಲಿಬಾರ್ ಮಾಡಲು ಆದೇಶಿಸಿದ. ಆದರೆ ಇದಕ್ಕೆ ಮ್ಯಾಜಿಸ್ಟ್ರೇಟ್ ಅನುಮತಿಯನ್ನು ಪಡೆದಿರಲಿಲ್ಲ. ಕಾನೂನು ಬಾಹಿರವಾಗಿ ನಡೆಸಿದ ಗೋಲಿಬಾರ್‌ನಲ್ಲಿ ಹೋರಾಟಗಾರರು ಮೃತಪಟ್ಟಿದ್ದರು. "ಇಷ್ಟೇ ಅಲ್ಲ. ೫೦ ಜನರನ್ನು ಗುಂಡಿಟ್ಟು ಕೊಲ್ಲುವುದಾಗಲಿ, ಕಾಂಗ್ರೆಸ್ ಹೋರಾಟವನ್ನು ಹತ್ತಿಕ್ಕುತ್ತೇನೆ" ಎಂದು ದರ್ಪದಿಂದ ನುಡಿದಿದ್ದ ಹ್ಯಾಮಿಲ್ಟನ್. ಇದೊಂದೇ ಘಟನೆಯಲ್ಲ, ಒಟ್ಟಾರೆ ಸ್ವಾತಂತ್ರ್ಯ ಹೋರಾಟವನ್ನು ಹತ್ತಿಕ್ಕುವುದರಲ್ಲಿ ಹ್ಯಾಮಿಲ್ಟನ್‌ಗೆ ಎಲ್ಲಿಲ್ಲದ ಪ್ರೀತಿ. ೧೯೩೧ರ ಮಾರ್ಚ್ ೨೧ರಂದು ಘಟನೆಯೊಂದರ ಕುರಿತು ಮುಖ್ಯ ಕಾರ್ಯದರ್ಶಿಗೆ ಬರೆದ ಪತ್ರವೊಂದರಲ್ಲಿ ಆತನ ಮನಃಸ್ಥಿತಿ ತಿಳಿಯುತ್ತದೆ.

"ಈ ಜನರ ವಿರುದ್ಧ ಕಠಿಣ ಮನೋಭಾವನೆಯಿಂದ ವರ್ತನೆ ಮಾಡಬೇಕು ಎಂದು ನಾನು ಆಲೋಚಿಸಿದ್ದೆ. ಆದರೆ ಅವರ ಪ್ರಭಾವವನ್ನು ಕಡಿಮೆ ಮಾಡಿ ಅವರಿಂದಾಗುವ ಹಾನಿಯನ್ನು ಸೀಮಿತಗೊಳಿಸುವ ಪ್ರಬುದ್ಧ ನಿರ್ಣಯಕ್ಕೆ ಬರಲಾಯಿತು".

"ಇನ್ನು ಮುಂದೆ ಇವರ ಮೇಲೆ ಯಾವುದೇ ಕ್ರಮ ಕೈಗೊಳ್ಳಲು ಅನುಕೂಲವಾಗುವಂತೆ ಈ ಎಲ್ಲರಾಜಕೀಯ ನಾಯಕರ ಕುರಿತ ಕಡತಗಳನ್ನು ಸಿದ್ಧಪಡಿಸಲಾಗಿದೆ. ಈ ಪ್ರತಿಯೊಬ್ಬ ನಾಯಕನ ಇತಿಹಾಸ, ಹಿನ್ನೆಲೆ, ಚಟುವಟಿಕೆಗಳು ಹಾಗೂ ಭಾಷಣಗಳನ್ನು ಈ ಕಡತಗಳು ಒಳಗೊಂಡಿವೆ"



ಎಂದು ಹೇಳಿದ್ದ. ಅಂದರೆ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರನ್ನು ಗುಂಡಿಟ್ಟು ಕೊಂದರೂ ಅದನ್ನು ಸಮರ್ಥನೆ ಮಾಡಿಕೊಳ್ಳಲು ಬೇಕಾಗುವಷ್ಟು ಕಡತವನ್ನು ಈತ ಸಿದ್ಧಪಡಿಸಿಕೊಂಡಿದ್ದ.

ನಾರಿಮನ್ ಘಟನೆ ನಡೆದು ಕೇವಲ ಎರಡು ವರ್ಷದ ಅಂತರದಲ್ಲೆ ಅಂತಹ ಕ್ರೂರ ಅಧಿಕಾರಿಯ ಹೆಸರನ್ನು ಮೈಸೂರು ಸಂಸ್ಥಾನದ ಕಟ್ಟಡವೊಂದಕ್ಕೆ ನಾಮಕರಣ ಮಾಡುವುದಕ್ಕೆ ಭಾರೀ ಪ್ರತಿರೋಧ ವ್ಯಕ್ತವಾಯಿತು. ಹ್ಯಾಮಿಲ್ಟನ್ ಭವನ ನಾಮಕರಣ ವಿರೋಧಿಸಲು ತಗಡೂರು ರಾಮಚಂದ್ರರಾವ್ ಅವರ ಸಂಚಾಲಕತ್ವದಲ್ಲಿ ಸಮಿತಿ ರಚನೆ ಮಾಡಲಾಯಿತು. ಈ ಸಮಿತಿಯಲ್ಲಿ ಎ.ಎನ್. ಸತ್ಯನಾರಾಯಣರಾವ್, ಎಂ. ಎನ್. ಜೋಯಿಸ್, ಸುಬ್ಬರಾಯ ಉಪಾಧ್ಯಾಯ ಮುಂತಾದ ಸದಸ್ಯರಿದ್ದರು.

ಹ್ಯಾಮಿಲ್ಟನ್ ಭವನ ನಾಮಕರಣ ವಿಚಾರವು ಮೈಸೂರು ರಾಜ್ಯದ ಹೋರಾಟಗಾರರಿಗೆ ಇಂಧನ ದೊರಕಿಸಿ ಕೊಟ್ಟಿತು. ಹೋರಾಟದ ಕಿಚ್ಚು ಒಳಗೆ ಅದಾಗಲೇ ಇರುತ್ತದೆ. ಅದಕ್ಕೆ ಒಂದು ಕಿಡಿ ತಾಕುವುದನ್ನೇ ಕಾಯುತ್ತಿರುತ್ತದೆ ಅಲ್ಲವೇ ಅದೇ ರೀತಿ. ಮೈಸೂರಿನಲ್ಲಿ ಲಕ್ಷ್ಮೀನಾರಾಯಣರಾವ್ ಅವರ ನೇತೃತ್ವದಲ್ಲಿ ಪ್ರತಿಭಟನಾ ಸಭೆ ನಡೆಯಿತು. ಅಲ್ಲಿ ಮಾತನಾಡುತ್ತ, "ಇಲ್ಲಿವರೆಗೆ ಅನೇಕ ಸಾಮರ್ಥ್ಯವಂತ ವ್ಯಕ್ತಿಗಳು ಐಜಿಪಿ ಸ್ಥಾನ ಅಲಂಕರಿಸಿದ್ದಾರೆ, ನಿರ್ಗಮಿಸಿದ್ದಾರೆ. ಆದರೆ ಅಂಥವರಿಗಾಗಿ ಏನನ್ನೂ ಅರ್ಪಣೆ ಮಾಡಲಿಲ್ಲ. ಆದರೆ ಈಗ ಸೆಂಟ್ರಲ್ ಪೊಲೀಸ್ ಠಾಣೆ ಕಟ್ಟಡವನ್ನು ಹ್ಯಾಮಿಲ್ಟನ್ ಹೆಸರಿನಲ್ಲಿ ನಾಮಕರಣ ಮಾಡುವ ಉದ್ದೇಶ ನಮಗೆ ತಿಳಿಯುತ್ತಿಲ್ಲ" ಎಂದರು.

ಇದೇ ಸಭೆಯಲ್ಲಿ ಮಾತನಾಡಿದ ಎಚ್.ಸಿ. ದಾಸಪ್ಪನವರು, "ಹ್ಯಾಮಿಲ್ಟನ್ ಹೆಸರಿಡುವುದು ಜನರಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ. ನಮ್ಮ ನೆಲದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ರಕ್ತ ಹರಿಸಿದ ಅಧಿಕಾರಿಯನ್ನು ಕಂಡರೆ ಎಲ್ಲರ ರಕ್ತ ಕುದಿಯುತ್ತದೆ. ಅಂತಹ ವ್ಯಕ್ತಿಯ ಹೆಸರನ್ನು ಸಂಭ್ರಮದಿಂದ ಆಚರಣೆ ಮಾಡುವುದು ಕೆಟ್ಟ ವಿಚಾರ" ಎಂದು ಟೀಕಿಸಿದರು.

ಮುಂದುವರಿದು, "ಮಹಾರಾಜರ ಪ್ರೈವೇಟ್ ಸೆಕ್ರೆಟರಿ, ಮೈಸೂರು ಮುಖ್ಯ ನ್ಯಾಯಾಧೀಶ, ವಿದ್ಯುತ್ ಇಲಾಖೆಯ ಮುಖ್ಯಸ್ಥ, ಮೆಡಿಕಲ್, ಸೆಂಟ್ರಲ್

ಹಾಗೂ ಮಹಾರಾಜ ಕಾಲೇಜು ಮುಂತಾದವುಗಳ ಪ್ರಾಂಶುಪಾಲರ ಸ್ಥಾನವನ್ನು ಯೂರೋಪಿಯನ್ನರೇ ಅಲಂಕರಿಸಿದ್ದಾರೆ. ಸರ್ ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ವಿದೇಶಿ ಅಧಿಕಾರಿಗಳನ್ನು ಒಳಗೆ ಬಿಟ್ಟುಕೊಂಡಿರಲಿಲ್ಲ. ಆದರೆ ಈಗಿನ ಸರ್ಕಾರ ಬ್ರಿಟಿಷರಿಂದಲೇ ಸಹಾಯ ಪಡೆಯಲು ಮುಂದಾಗಿದೆ" ಎಂದು ಸರ್ಕಾರದ ಜತೆಗೆ ಮಿರ್ಜಾ ಅವರನ್ನೂ ಟೀಕಿಸಿದರು. ೧೯೩೯ರ ಜನವರಿ ೬ರಂದು ಮೈಸೂರಿನ ಟೌನ್‌ಹಾಲ್ ಮೈದಾನದಲ್ಲಿ ನಡೆದ ಈ ಸಭೆಯಲ್ಲಿ, 'ಹ್ಯಾಮಿಲ್ಟನ್ ಹೆಸರನ್ನು ಕೂಡಲೇ ಕಿತ್ತೊಗೆಯಬೇಕು' ಎಂದು ಸರ್ಕಾರವನ್ನು ಒತ್ತಾಯಿಸುವ ನಿರ್ಣಯ ಕೈಗೊಳ್ಳಲಾಯಿತು.

೧೩ನೇ ಜನವರಿಯಂದು ಬೆಂಗಳೂರಿಗೆ ವೈಸರಾಯ್ ಭೇಟಿ ನಿಗದಿಯಾಗಿದ್ದು ಹೋರಾಟಗಾರರಿಗೆ ತಿಳಿಯಿತು. ಈ ಅವಕಾಶವನ್ನೂ ಬಳಸಿಕೊಳ್ಳಲು ನಿರ್ಧರಿಸಿ 'ವೈಸರಾಯ್ ವಾಪಸ್ ಹೋಗಲಿ' ಎಂಬ ಘೋಷಣೆಗಳೊಂದಿಗೆ ಮೆರವಣಿಗೆಯನ್ನು ಕಬ್ಬನ್‌ಪೇಟೆ ಕಾಂಗ್ರೆಸ್ ಸಮಿತಿಯಿಂದ ನಡೆಸಲಾಯಿತು. ಎಸ್. ರಾಮಸ್ವಾಮಿ, ಎನ್.ಡಿ. ಶಂಕರ್ ಮುಂತಾದವರು ಈ ಪ್ರತಿಭಟನೆ ನೇತೃತ್ವ ವಹಿಸಿದ್ದರು. ವೈಸರಾಯ್ ಆಗಮಿಸುವ ಮಾರ್ಗದಲ್ಲಿ ನಿಂತು ಮೆರವಣಿಗೆ ವೀಕ್ಷಿಸುವುದಲ್ಲ, ಹೋರಾಟದಲ್ಲಿ ಭಾಗವಹಿಸಲು ಎಲ್ಲರೂ ಬನಪ್ಪ ಪಾರ್ಕ್‌ಗೆ ಬನ್ನಿ ಎಂದು ಮೆರವಣಿಗೆಯುದ್ದಕ್ಕೂ ಸಾರ್ವಜನಿಕರಿಗೆ ಹೇಳುತ್ತ ಸಾಗಿದರು. ಬನಪ್ಪ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನಾ ಸಭೆಯೊಂದು ನಡೆಯಿತು. ಎಸ್. ರಾಮಸ್ವಾಮಿ ಅದರ ಅಧ್ಯಕ್ಷತೆ ವಹಿಸಿದ್ದರೆ ಎನ್.ಡಿ. ಶಂಕರ್, ಸವಾಯಿ ಅಶ್ವತ್ಥರಾವ್ ಮುಂತಾದವರು ಭಾಷಣ ಮಾಡಿದರು. ವೈಸರಾಯ್ ಭೇಟಿ ಎನ್ನುವುದು ನಮಗೆ ಸಂತಸದ ವಿಚಾರವಲ್ಲ. ಲಕ್ಷಾಂತರ ಜನರ ಗುಲಾಮಗಿರಿಯನ್ನು ನೆನಪಿಸುವುದು ಹಾಗೂ ಬ್ರಿಟಿಷರ ಅಧಿಪತ್ಯವನ್ನು ಸಾಬೀತುಪಡಿಸುವ ಕೃತ್ಯ ಇದು ಎಂದು ಟೀಕಿಸಿದರು.

೧೯೩೯ರ ಜನವರಿ ೨೬ರಂದು ಸ್ವಾತಂತ್ರ್ಯ ದಿನವನ್ನಾಗಿ ಆಚರಿಸಲಾಯಿತು, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವ ಸಂಕಲ್ಪವನ್ನು ರಾಜ್ಯಾದ್ಯಂತ ಬೋಧನೆ ಮಾಡಲಾಯಿತು. ಹ್ಯಾಮಿಲ್ಟನ್ ಸತ್ಯಾಗ್ರಹ ಸಂಬಂಧಿಸಿದಂತೆ ತಗಡೂರು ರಾಮಚಂದ್ರರಾವ್ ಅವರನ್ನು ಫೆಬ್ರವರಿ ೧೩ರಂದು



ಬಂಧಿಸಲಾಯಿತು. ಜಾಮೀನು ಪಡೆಯಲು ಭದ್ರತಾ ಹಣ ನೀಡಬೇಕೆಂಬ ಬ್ರಿಟಿಷರ ನಿಬಂಧನೆಗೆ ರಾವ್ ಅವರು ಒಪ್ಪಲಿಲ್ಲವಾದ್ದರಿಂದ ಪೂರ್ಣ ಶಿಕ್ಷೆಯನ್ನು ಜೈಲಿನಲ್ಲಿ ಅನುಭವಿಸಿದರು.

ವಿವಿಧೆಡೆ ನಡೆಯುತ್ತಿದ್ದ ಹೋರಾಟ ಈಗ ವಿಭಿನ್ನ ಸ್ವರೂಪ ಪಡೆಯಿತು. ಪ್ರತಿದಿನ ಬೆಳಗ್ಗೆಯಿಂದ ಸಂಜೆವರೆಗೆ ತಲಾ ಇಬ್ಬರಂತೆ ಸರಣಿ ಸತ್ಯಾಗ್ರಹ ಮಾಡುವ ತೀರ್ಮಾನ ಆಯಿತು. ಫೆಬ್ರವರಿ ೧೫ರಿಂದ ಆರಂಭವಾದ ಸತಾಗ್ರಹದಲ್ಲಿ ಪ್ರತಿದಿನ ಇಬ್ಬರಂತೆ ಮಾರ್ಚ್ ೩೧ರವರೆಗೆ ಅಂದರೆ ಸುಮಾರು ೪೫ ದಿನದವರೆಗೆ ಸತ್ಯಾಗ್ರಹ ನಡೆಯಿತು.

ರಾಜ್ಯದ ವಿವಿಧೆಡೆಯಿಂದ ಆಗಮಿಸಿ ಸತ್ಯಾಗ್ರಹದಲ್ಲಿ ಜನರು ಭಾಗವಹಿಸಿದರು. ಅನೇಕರು ಬಂಧನಕ್ಕೊಳಗಾಗಿ ಜೈಲುವಾಸ ಅನುಭವಿಸಿದರು. ಎ.ಎನ್. ಸತ್ಯನಾರಾಯಣರಾವ್, ಸುಬ್ಬರಾವ್ ಉಪಾಧ್ಯಾಯ, ಎಂ. ಎನ್. ಜೋಯಿಸ್ ಅವರೂ ಬಂಧಿತರು. ರಾಮಚಂದ್ರರಾವ್ ಅವರಂತೆಯೇ ಜಾಮೀನು ಪಡೆಯಲು ಭದ್ರತಾ ಠೇವಣಿ ನೀಡಲು ನಿರಾಕರಿಸಿ ಎಲ್ಲರೂ ಜೈಲುವಾಸ ಮುಂದುವರಿಸಿದರು. ಜವರಪ್ಪಗೌಡ ಎಂಬ ಹೋರಾಟಗಾರರ ವಿರುದ್ಧ ಮತ್ತಷ್ಟು ಕಠಿಣ ಕಾನೂನು ಅನ್ವಯ ಮಾಡಿ, ಒಂದು ವರ್ಷ ಯಾವುದೇ ಅಶಾಂತಿಯುತ ಘಟನೆಯಲ್ಲಿ ಭಾಗಿಯಾಗುವುದಿಲ್ಲ ಎಂದು ೨೦೦ ರೂ. ಬಾಂಡ್ ಕಾಗದದ ಮೇಲೆ ಬರೆದು ಕೊಡುವಂತೆ ಸರ್ಕಾರ ಕೇಳಿತು. ಅದನ್ನು ನಿರಾಕರಿಸಿದ್ದರಿಂದ ಅವರೂ ಜೈಲಿನಲ್ಲೆ ವಸತಿ ಕಂಡುಕೊಂಡರು. ಪೊಲೀಸರಿಗೆ ತೋಚಿದ ಕಾಯ್ದೆಗಳನ್ನೆಲ್ಲ ಬಳಸಿ ಸತ್ಯಾಗ್ರಹಿಗಳ ವಿರುದ್ಧ ಪ್ರಕರಣ ದಾಖಲಿಸಲಾಯಿತು. ಹ್ಯಾಮಿಲ್ಟನ್ ಭವನ ವಿರೋಧಿಸಿ ನಡೆದ ಸತ್ಯಾಗ್ರಹ ಸಂಬಂಧಿಸಿಯೇ ೯೮ ಸತ್ಯಾಗ್ರಹಿಗಳ ವಿರುದ್ಧ ಪ್ರಕರಣ ದಾಖಲಿಸಲಾಯಿತು. ಎರಡು ತಿಂಗಳಿಂದ ಒಂದು ವರ್ಷದವರೆಗೆ ಇವರಿಗೆ ಜೈಲುವಾಸದ ಶಿಕ್ಷೆ ವಿಧಿಸಲಾಯಿತು.

ಇದರ ನಂತರವೂ ಹೋರಾಟ ಮುಂದುವರಿಯಿತು. ೧೯೩೯ರ ಸೆಪ್ಟೆಂಬರ್ ೧ರಂದು ಟಿ.ಸಿದ್ಧಲಿಂಗಯ್ಯನವರು ಬೆಂಗಳೂರು ಬನಪ್ಪ ಪಾರ್ಕ್‌ನಲ್ಲಿ ಕಾನೂನುಭಂಗ ಮಾಡಿ ಬಂಧಿತರಾಗುವ ಮೂಲಕ ಮತ್ತೊಂದು ಹಂತದ ಸ್ವಾತಂತ್ರ್ಯ ಚಳವಳಿಗೆ ಚಾಲನೆ ನೀಡಲಾಯಿತು. ಮುಂದೆ ತುಮಕೂರು,

ಚಿತ್ರದುರ್ಗ, ಶಿವಮೊಗ್ಗ ಮುಂತಾದ ಜಿಲ್ಲೆಗಳಲ್ಲಿ ಸಾವಿರಾರು ರೈತರು ಭಾರೀ ಹುಮ್ಮಸ್ಸಿನಿಂದ ಪಾಲುಗೊಂಡು ಬಂಧಿತರಾದರು.

ಚಿತ್ರದುರ್ಗ ಬಳಿ ತುರವನೂರಲ್ಲಿ ಎಸ್. ನಿಜಲಿಂಗಪ್ಪ ಸತ್ಯಾಗ್ರಹ ನಡೆಸಿದರು. ಅರಣ್ಯ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಈಚಲು ಮರಗಳನ್ನು ಕಡಿದಿದ್ದಕ್ಕಾಗಿ ಎಸ್. ನಿಜಲಿಂಗಪ್ಪ ಸೇರಿ ೧೪ ಜನರನ್ನು ಬಂಧಿಸಲಾಯಿತು. ಬಂಧಿತರಲ್ಲಿ ನೂರಾರು ಮಹಿಳೆಯರೂ ಇದ್ದರು. ಸರಕಾರವು ಸತ್ಯಾಗ್ರಹಿಗಳ ಮೇಲೆ ಭಾರಿ ಹಿಂಸಾಚಾರ, ದೌರ್ಜನ್ಯ ನಡೆಸಿತು. ಈ ಬಗ್ಗೆ ಬಂದ ವರದಿಗಳನ್ನು ಕೇಳಿ ಗಾಂಧೀಜಿ ವಿಚಾರಣೆಗಾಗಿ ತಮ್ಮ ಕಾರ್ಯದರ್ಶಿ ಮಹಾದೇವ ದೇಸಾಯಿ ಅವರನ್ನು ಕಳುಹಿಸಿದರು. ಗಾಂಧೀ–ನೆಹರೂರಿಗೆ ವಿದುರಾಶ್ವತ್ಥದಿಂದ ಆರಂಭಿಸಿ ಈ ಚಳವಳಿಯವರೆಗಿನ ವರದಿಗಳು ತಲುಪಿ ದಿವಾನ್ ಮಿರ್ಜಾರ ಸ್ನೇಹದ ಮುಖವಾಡ ಬಯಲಾಯಿತು.

ಸತ್ಯಾಗ್ರಹದಲ್ಲಿ ತೊಡಗಿದ್ದ ಒಟ್ಟು ೨,೯೦೦ ಜನರಿಗೆ ಶಿಕ್ಷೆ ಆಯಿತು. ಇದೇ ಕಾಲಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರು ೧೯೪೦ರ ಆಗಸ್ಟ್ ೩ರಂದು ದಿವಂಗತರಾಗಿ ಜಯಚಾಮರಾಜ ಒಡೆಯರಿಗೆ ಪಟ್ಟವಾಯಿತು. ಈ ಸಂದರ್ಭದಲ್ಲಿ ಖೈದಿಗಳ ಬಿಡುಗಡೆ ಆಯಿತು. ಜಯಚಾಮರಾಜ ಒಡೆಯರು ಕೆ.ಆರ್.ಶ್ರೀನಿವಾಸ ಅಯ್ಯಂಗಾರ್ ಕಮಿಟಿಯ ವರದಿಯ ಕೆಲವಂಶ ಜಾರಿಗೆ ತಂದರು. ದಿವಾನರ ಕೌನ್ಸಿಲ್‌ನ ನಾಲ್ವರು ಸದಸ್ಯರಲ್ಲಿ ಇಬ್ಬರನ್ನು ಪ್ರಜಾಪ್ರತಿನಿಧಿ ಸಭೆಗೆ ಚುನಾಯಿತರಾದ ಸದಸ್ಯರಿಂದ ಆಯ್ಕೆ ಮಾಡಿದರು. ಆದರೂ ಈ ಸದಸ್ಯರು (ಮಂತ್ರಿಗಳು) ಪ್ರಜಾಪ್ರತಿನಿಧಿ ಸಭೆಗೆ ಜವಾಬ್ದಾರರಾಗಿರಲಿಲ್ಲ.

೧೯೪೧ರ ಫೆಬ್ರವರಿಯಲ್ಲಿ ಪ್ರಜಾಪ್ರತಿನಿಧಿ ಸಭೆಗೆ ಚುನಾವಣೆ ನಡೆದು, ಸರಕಾರದ ವಿವಿಧ ರೀತಿಯ ತೀವ್ರ ವಿರೋಧ ಒತ್ತಡದ ದಬ್ಬಾಳಿಕೆಯ ತಂತ್ರಗಳ ನಡುವೆಯೂ ೨೯೮ ಸ್ಥಾನಗಳಲ್ಲಿ ಕಾಂಗ್ರೆಸ್ ೧೦೬ ಸ್ಥಾನಗಳನ್ನು ಗಳಿಸಿತು. ಮೇಲ್ಮನೆಗೆ ನಡೆದ ಚುನಾವಣೆಯಲ್ಲಿ ೪೪ರಲ್ಲಿ ೧೮ ಸ್ಥಾನ ಗಳಿಸಿತು. ಚುನಾಯಿತ ಸದಸ್ಯರಲ್ಲಿ ಎಚ್.ಬಿ. ಗುಂಡಪ್ಪಗೌಡ ಮತ್ತು ಜೆ.ಎಂ.ಇಮಾಂರನ್ನು ದಿವಾನರ ಕೌನ್ಸಿಲ್ ಸದಸ್ಯರಾಗಿ ಸರಕಾರವು ನೇಮಿಸಿದರೂ ಅವರು ಪ್ರಜಾಪ್ರತಿನಿಧಿಗಳಿಗೆ ಜವಾಬ್ದಾರರಾಗಿರಲಿಲ್ಲ.



ಮಿರ್ಜಾ ಅವರ ನಂತರ ೧೯೪೧ರ ಮೇನಲ್ಲಿ ಎನ್. ಮಾಧವರಾವ್ ಅವರು ದಿವಾನರಾದರು. ಮಾಧವರಾಯರು ಶ್ರೀನಿವಾಸಯ್ಯಂಗಾರ್ ಕಮಿಟಿಯ ಶಿಫಾರಸುಗಳನ್ನು ಜಾರಿಗೆ ತಂದು ಇಬ್ಬರು ಚುನಾಯಿತ ಪ್ರಜಾಪ್ರತಿನಿಧಿಗಳನ್ನು ದಿವಾನರ ಕೌನ್ಸಿಲ್‌ಗೆ ಸೇರಿಸಿಕೊಂಡರು. ಆದರೆ ಕಾಂಗ್ರೆಸ್‌ಗೆ ಅದರಿಂದ ಸಮಾಧಾನ ಆಗಲಿಲ್ಲ.

ಮಾಧವರಾಯರ ದಿವಾನಗಿರಿ ಅವಧಿಯು ಸೇನೆಗೆ ಬೇಕಾದ ಹಾಲು, ತರಕಾರಿ, ಮಾಂಸದ ಪೂರೈಕೆ, ಕಾರ್ಖಾನೆಗಳಲ್ಲಿ ಉತ್ಪಾದನೆ ನಿಲ್ಲದಂತೆ ನೋಡಿಕೊಳ್ಳುವುದು, ಉಳಿತಾಯ ಯೋಜನೆಗಳ ಕಾರ್ಯಾಚರಣೆ, 'ಕ್ವಿಟ್ ಇಂಡಿಯಾ' ಚಳವಳಿಯನ್ನು ಹತ್ತಿಕ್ಕುವುದು, ಹೀಗೆ ಸಂದಿಗ್ಧ ಕಾಲವಾಯಿತು.

ಒಟ್ಟಿನಲ್ಲಿ ೧೯೪೭ರಲ್ಲಿ ಸ್ವಾತಂತ್ರ ಸಿಗುವವರೆಗೂ ಜವಾಬ್ದಾರಿ ಸರ್ಕಾರ ಸಾಕಾರ ಆಗಲೇ ಇಲ್ಲ. ಅಂತರ್ಗಾಮಿಯಾಗಿ ಈ ಹೋರಾಟಗಳು ನಡೆಯುತ್ತಿರುವಾಗಲೇ, ರಾಷ್ಟ್ರೀಯ ಮಟ್ಟದಲ್ಲಿ ಬ್ರಿಟಿಷರನ್ನು ತೊಲಗಿಸಬೇಕು ಎಂಬ ಜಾಗೃತಿ ಹೆಚ್ಚಾಯಿತು. ಅಂತಹ ಮಹತ್ವದ ಹೋರಾಟದಲ್ಲಿ ಬೆಂಗಳೂರು ಭಾಗವಹಿಸಿದ ಹೋರಾಟಗಳಲ್ಲಿ ಕ್ವಿಟ್‌ಇಂಡಿಯಾ ಸಹ ಒಂದು.

## ಕ್ವಿಟ್ ಇಂಡಿಯಾ ಹೋರಾಟ

'ಭಾರತ ಬಿಟ್ಟು ತೊಲಗಿ' (ಚಲೇಜಾವ್) ಎಂಬ ಗಾಂಧೀಜಿಯವರ ಘೋಷಣೆ ೧೯೪೨ರ ಆಗಸ್ಟ್ ೮ರ ರಾತ್ರಿ ಬಾಂಬೆಯಲ್ಲಿ ಮೊಳಗಿದಾಗ ಅವರ ಮತ್ತು ನೆಹರೂ, ಆಜಾದ್ ಮುಂತಾದ ಎಲ್ಲ ಗಣ್ಯ ಕಾಂಗ್ರೆಸ್ ನಾಯಕರ ಬಂಧನವಾಯಿತು. ಆಗಸ್ಟ್ ೯ರ ಭಾನುವಾರ ದೇಶದ ಎಲ್ಲ ನಗರ, ಪಟ್ಟಣಗಳಿಗೆ ಕಾಳ್ಗಿಚ್ಚಿನಂತೆ ಈ ಕರೆ ಮತ್ತು ಬಂಧನದ ಸುದ್ದಿ ಹರಡಿ ಮುಂದಿನ ಎರಡು ಮೂರು ದಿನಗಳಲ್ಲಿ ಹಳ್ಳಿ ಹಳ್ಳಿಗಳಲ್ಲೂ ಎಂಬಂತೆ ಜನರ ಕ್ರೋಧ ಭುಗಿಲೆದ್ದಿತೆಂದರೆ ಅತಿಶಯೋಕ್ತಿಯಾಗದು. ಮೈಸೂರು ಸಂಸ್ಥಾನದಲ್ಲೂ ಜವಾಬ್ದಾರಿ ಸರಕಾರದ ಬೇಡಿಕೆ ತಾತ್ಕಾಲಿಕವಾಗಿ ಮೂಲೆಪಾಲಾಗಿ, ಹಿಂದಿಗಿಂತಲೂ ಹೆಚ್ಚು ಉಗ್ರವಾಗಿ 'ಕ್ವಿಟ್ ಇಂಡಿಯಾ' ಎಂಬ ಬ್ರಿಟಿಷರ ವಿರುದ್ಧವಾದ ಕೂಗು ಎಲ್ಲೆಡೆ ಮಾರ್ದನಿಗೊಂಡಿತು. ಸ್ಥಳೀಯ ಸ್ವಾತಂತ್ರ್ಯಕ್ಕೂ ಮಿಗಿಲಾಗಿ ರಾಷ್ಟ್ರೀಯ ಸ್ವಾತಂತ್ರ್ಯಕ್ಕೆ ಗುದ್ದಾಡುವುದು ಹೆಚ್ಚು ಪ್ರಸ್ತುತ ಎಂದು

ಅನೇಕರಿಗೆ ಮನವರಿಕೆಯಾಗಿತ್ತು. ಯುದ್ಧದ ಕಾಲವಾಗಿ ಅಕ್ಕಿ, ಸೀಮೆಎಣ್ಣೆ, ಸೌದೆಗಳ ಮಾರಾಟದ ಮೇಲೆ ನಿಯಂತ್ರಣ ಹೇರಿ, ಪಡಿತರ ಪದ್ಧತಿಯನ್ನು ಜಾರಿಗೆ ತಂದು ಜನ ನಾನಾ ರೀತಿಯ ತೊಂದರೆಗಳಿಗೆ ಒಳಗಾಗಿದ್ದ ಸಂದಿಗ್ಧ ಕಾಲ ಅದು.

## ಕಾಂಗ್ರೆಸ್ ಮೇಲೆ ಪ್ರತಿಬಂಧ

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ, ಜಿಲ್ಲಾ ಸಮಿತಿ ಮತ್ತು ನಗರ ಸಮಿತಿಗಳು ಕಾನೂನುಬಾಹಿರ ಸಂಘಟನೆಗಳೆಂದು ಮೈಸೂರು ಸರ್ಕಾರವು ಆಗಸ್ಟ್ ೯ ರಂದು ಘೋಷಿಸಿತು. ಅದೇ ದಿನ ಸಂಜೆ ಚಿಕ್ಕಲಾಲ್‌ಬಾಗ್‌ನಲ್ಲಿ ಎಚ್.ಸಿ. ಸೂರ್ಯನಾರಾಯಣರಾವ್ ಅವರ ಅಧ್ಯಕ್ಷತೆಯಲ್ಲಿ ಗಾಂಧೀಜಿ ಮತ್ತು ಇತರ ನಾಯಕರ ಬಂಧನದ ಪ್ರತಿಭಟನಾರ್ಥ ಸಭೆ ನಡೆದು, ಕೆಂಗಲ್ ಹನುಮಂತಯ್ಯ, ಎನ್.ಡಿ.ಶಂಕರ್, ರಾಮಸ್ವಾಮಿ ಭಾಷಣ ಮಾಡಿದರು. ಅದು ಭಾನುವಾರವಾದರೂ ವಿದ್ಯಾರ್ಥಿಗಳೂ ಕಾರ್ಮಿಕರೂ ಸಾರ್ವಜನಿಕರೂ ಸಾವಿರಾರು ಜನ ಕಿಕ್ಕಿರಿದು ಸೇರಿದ್ದರು. ಆಗಸ್ಟ್ ೧೦ರ ಬೆಳಗ್ಗೆ ನ್ಯಾಷನಲ್ ಹೈಸ್ಕೂಲಿನ ವಿದ್ಯಾರ್ಥಿಗಳ ನೇತೃತ್ವದಲ್ಲಿ ಭಾರೀ ಮೆರವಣಿಗೆ ನಡೆದು ಶಾಲೆಗಳೂ ಕಾಲೇಜುಗಳೂ ಮುಚ್ಚಿದ್ದವು. ಈ ವಿದ್ಯಾರ್ಥಿಗಳ ವಿನಂತಿಯಂತೆ ದೊಡ್ಡಪೇಟೆ (ಈಗಿನ ಅವೆನ್ಯೂರಸ್ತೆ), ಮಾರ್ಕೆಟ್, ಚಿಕ್ಕಪೇಟೆ ಇಲ್ಲೆಲ್ಲ ಅಂಗಡಿಗಳು ಮುಚ್ಚಿದ್ದವಲ್ಲದೆ ಮೆಡಿಕಲ್ ಕಾಲೇಜು, ಫೋರ್ಟ್ ಹೈಸ್ಕೂಲುಗಳಲ್ಲಿ ನಡೆಯುತ್ತಿದ್ದ ಪರೀಕ್ಷೆಗಳೂ ನಿಂತವು, ಸೆಂಟ್ರಲ್ ಕಾಲೇಜು, ಸೈಂಟ್ ಜೋಸೆಫ್ ಕಾಲೇಜು, ಮಹಾರಾಣಿ ಕಾಲೇಜು ಇಂಟರ್ ಮೀಡಿಯಟ್ ಕಾಲೇಜುಗಳೂ ಮುಚ್ಚಿದವು. ಶಾಲೆ ಕಾಲೇಜುಗಳ ಈ ಮುಷ್ಕರಎರಡು ತಿಂಗಳಿಗೂ ಮೀರಿ ಸಾಗಿತು.

ಕ್ವಿಟ್ ಇಂಡಿಯಾ ಹೋರಾಟವು ಜ್ವಾಲಾಮುಖಿಯಂತೆ ಎಲ್ಲ ಕಡೆಗಳಲ್ಲಿ ಪುಟಿದೇಳುತ್ತ ಬ್ರಿಟಿಷರನ್ನು ನಡುಗಿಸಲಾರಂಭಿಸಿತು. ನಗರಗಳಲ್ಲಿ ವಿದ್ಯಾರ್ಥಿಗಳು ಕಾರ್ಮಿಕರು ವ್ಯಾಪಾರಿಗಳು ತಮ್ಮ ಶಾಲೆ ಹಾಗೂ ಕೆಲಸಗಳನ್ನು ಬಹಿಷ್ಕರಿಸಿ ಬ್ರಿಟಿಷರ ವಿರುದ್ಧ ರಸ್ತೆಗಿಳಿದರು. ಹಳ್ಳಿಗಳಲ್ಲೂ ಕ್ವಿಟ್ ಇಂಡಿಯಾ ಘೋಷಣೆಯನ್ನು ಗೋಡೆಗಳ ಮೇಲೆ ಬರೆಯಲಾಯಿತು, ಮದ್ಯದಂಗಡಿಗಳನ್ನು





**ಮುಷ್ಕರನಿರತ ಕಾರ್ಮಿಕರು**

ಬಹಿಷ್ಕರಿಸಲಾಯಿತು, ಕೆಲವೆಡೆ ಸೇಂದಿ ಮಾರುವವರ ಮೇಲೆ ದಾಳಿಯೂ ನಡೆಯಿತು. ಅನೇಕ ಕಡೆಗಳಲ್ಲಿ ಟೆಲಿಗ್ರಾಫ್ ತಂತಿಗಳನ್ನು ಹೋರಾಟಗಾರರು ತುಂಡರಿಸಿದರು. ಸಾರ್ವಜನಿಕ ಸಭೆಗಳನ್ನು ನಡೆಸಕೂಡದು ಎಂದು ಸರ್ಕಾರ ಹೊರಡಿಸಿದ್ದ ಆದೇಶವನ್ನು ಧಿಕ್ಕರಿಸಿ ಸಾರ್ವಜನಿಕ ಸಭೆ, ಮೆರವಣಿಗೆ ನಡೆಸುವುದು ಸಾಮಾನ್ಯವಾಗಿತ್ತು. ಇದರಿಂದ ಬೇಸತ್ತ ಮೈಸೂರು ಸರ್ಕಾರವು, ಕಾಂಗ್ರೆಸ್‌ನ ಎಲ್ಲ ಕಾರ್ಯದರ್ಶಿಗಳಿಗೆ ಹಾಗೂ ಪ್ರಮುಖ ಸದಸ್ಯರಿಗೆ ೧೯೪೨ರ ಆಗಸ್ಟ್ ೯ರಂದು ಪತ್ರ ಬರೆಯಿತು. ಮೈಸೂರಿನ ಎಲ್ಲ ಕಾಂಗ್ರೆಸ್ ಸಮಿತಿಗಳು, ಹಾಗೂ ಜಿಲ್ಲಾ ಮತ್ತು ನಗರ ಸಮಿತಿಗಳನ್ನೂ ಕಾನೂನುಬಾಹಿರ ಎಂದು ಘೋಷಿಸಿ ಬರ್ಖಾಸ್ತುಗೊಳಿಸಿತು. ಆದರೆ ಅಷ್ಟು ವೇಳೆಗೆ ಪರಿಸ್ಥಿತಿ ಕೈಮೀರಿ ಹೋಗಿತ್ತು. ಹೋರಾಟವು ಜನಾಂದೋಳನವಾಗಿ ರೂಪುಗೊಂಡಿತ್ತು.

೧೯೪೨ರ ಆಗಸ್ಟ್ ೯ರಂದೇ ಮಹಾತ್ಮಾ ಗಾಂಧೀಜಿ ಮತ್ತು ಅನೇಕರನ್ನು

ಬಂಧಿಸಲಾಗಿದೆ ಎಂಬ ಸುದ್ದಿ ಬಂದಿತು. ಅಂದು ಬೆಳಗ್ಗೆ ಸುದ್ದಿ ಸಿಕ್ಕಿದ ಕೂಡಲೆ ಬೆಂಗಳೂರಿನ ಚಿಕ್ಕಲಾಕ್‌ಬಾಗ್‌ನಲ್ಲಿ ಸಾರ್ವಜನಿಕ ಸಭೆಯೊಂದನ್ನು ಏರ್ಪಡಿಸಲಾಯಿತು. ಈ ಸಭೆಯ ನೇತೃತ್ವವನ್ನು ಎಚ್.ಸಿ. ಸೂರ್ಯನಾರಾಯಣ ರಾವ್ ಹಾಗೂ ಕೆಂಗಲ್ ಹನುಮಂತಯ್ಯ ವಹಿಸಿದ್ದರು. ಎನ್.ಡಿ. ಶಂಕರ್ ಹಾಗೂ ಕೆ. ರಾಮಸ್ವಾಮಿ ಅವರುಗಳು ನೆರೆದವರನ್ನು ಉದ್ದೇಶಿಸಿ ಭಾಷಣ ಮಾಡಿದರು. ರಾಷ್ಟ್ರೀಯ ನಾಯಕರನ್ನು ಬಂಧಿಸಿದ್ದನ್ನು ಬಲವಾಗಿ ಖಂಡಿಸಿದರು. ಅದೇ ಸಮಯದಲ್ಲಿ ಬಾಂಬೆಯಲ್ಲಿ ನಡೆಯುತ್ತಿದ್ದ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧಿವೇಶನದಲ್ಲಿ ರಾಜ್ಯದ ನಾಯಕರು ಭಾಗವಹಿಸಿದ್ದರು. ಆ ನಾಯಕರೆಲ್ಲರೂ ಆಗಮಿಸಿದ ನಂತರದಲ್ಲಿ ಅವರಜತೆ ಸಮಾಲೋಚನೆ ನಡೆಸಿ ಮುಂದಿನ ನಡೆಯನ್ನು ಕೈಗೊಳ್ಳುವ ನಿರ್ಧಾರವನ್ನು ಸಭೆಯಲ್ಲಿ ಕೈಗೊಳ್ಳಲಾಯಿತು.

ಆಗಸ್ಟ್ ೧೦ರ ಸೋಮವಾರದ ವೇಳೆಗೆ, ರಾಷ್ಟ್ರೀಯ ನಾಯಕರ ಬಂಧನ ವಿಚಾರವು ಸುದ್ದಿಪತ್ರಿಕೆಗಳ ಮೂಲಕ ಗ್ರಾಮೀಣ ಪ್ರದೇಶಗಳಿಗೂ ಹರಡಿತು. ಬೆಂಗಳೂರಿನಲ್ಲಿ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿದರು. ನ್ಯಾಷನಲ್ ಹೈಸ್ಕೂಲ್ ವಿದ್ಯಾರ್ಥಿಗಳು ಮುಂದಾಳತ್ವ ವಹಿಸಿದ್ದ ಮೆರವಣಿಗೆಯಲ್ಲಿ ಇತರೆ ಕಾಲೇಜುಗಳ ವಿದ್ಯಾರ್ಥಿಗಳೂ ಸೇರಿಕೊಂಡರು. ಮೆರವಣಿಗೆಯು ವಿವಿಧ ಶಿಕ್ಷಣ ಸಂಸ್ಥೆಗಳಾದ ಎಸ್‌ಎಲ್‌ಎನ್ ಹೈಸ್ಕೂಲ್, ಮಿಷನ್ ಹೈಸ್ಕೂಲ್, ಇಂಟರ್ ಮೀಡಿಯೇಟ್ ಕಾಲೇಜ್‌ಗಳ ಮೂಲಕ ಹಾದು ಹೋಯಿತು. ಈ ಎಲ್ಲ ಶಿಕ್ಷಣ ಸಂಸ್ಥೆಗಳನ್ನೂ ಬಂದ್ ಮಾಡಲಾಯಿತು. ರಾಷ್ಟ್ರೀಯ ನಾಯಕರನ್ನು ಬಂಧಿಸಿದ ಮೇಲೆ ಲಾಭದ ದೃಷ್ಟಿಯಿಂದ ಉದ್ಯಮ ವ್ಯಾಪಾರ ನಡೆಸುವುದು ಎಷ್ಟು ಸರಿ ಅಲ್ಲವೇ? ಮೆರವಣಿಗೆಯಲ್ಲಿ ತೊಡಗಿದ್ದ ವಿದ್ಯಾರ್ಥಿಗಳು ದಾರಿಯುದ್ದಕ್ಕೂ ವ್ಯಾಪಾರಿಗಳಲ್ಲಿ ಮನವಿ ಮಾಡಿದರು. ವ್ಯಾಪಾರಿಗಳೂ ಇದಕ್ಕೆ ಸ್ಪಂದಿಸಿದರು. ದೊಡ್ಡಪೇಟೆ, ಚಿಕ್ಕಪೇಟೆ, ಮಾರುಕಟ್ಟೆ ಮುಂತಾದೆಡೆ ಬಹುತೇಕ ಅಂಗಡಿ ಮುಂಗಟ್ಟುಗಳು ಮುಚ್ಚಲ್ಪಟ್ಟವು. ಪರೀಕ್ಷೆಗಳನ್ನು ಎದುರಿಸಬೇಕಿದ್ದ ಮೆಡಿಕಲ್ ಕಾಲೇಜು ಹಾಗೂ ಕೋಟೆ ಹೈಸ್ಕೂಲ್ ವಿದ್ಯಾರ್ಥಿಗಳೂ ಪ್ರತಿಭಟನೆಯಲ್ಲಿ ಸೇರಿಕೊಂಡರು. ಸೈಂಟ್ ಜೋಸೆಫ್ಸ್ ಹಾಗೂ ಸೆಂಟ್ರಲ್ ಕಾಲೇಜುಗಳನ್ನೂ ಮುಚ್ಚಲಾಯಿತು.



ಸೆಂಟ್ರಲ್ ಕಾಲೇಜಿನ ಕ್ರಿಕೆಟ್ ಕ್ರೀಡಾಂಗಣದಿಂದ ವಿದ್ಯಾರ್ಥಿಗಳೇ ಪೆರೇಡ್ ಮಾಡುತ್ತಿದ್ದರು. ರಸ್ತೆಗಳಲ್ಲಿ 'ಭಾರತ ಭೂಮಿ ಮನದೇ ಕಾನಿ' ಎನ್ನುವಂತಹ ದೇಶಭಕ್ತಿಗೀತೆ ಹೇಳುತ್ತಾ ಸಾಗುತ್ತಿದ್ದರು. ಅದೇಕೆ ತೆಲುಗು ಗೀತೆಯನ್ನೇ ಹೆಚ್ಚು ಹಾಡುತ್ತಿದ್ದರೋ ತಿಳಿಯದು. ಬಹುಶಃ ಇನ್ನೂ ಕನ್ನಡದ ರಾಷ್ಟ್ರಭಕ್ತಿ ಗೀತೆಗಳು ಜನಪ್ರಿಯ ಬಳಕೆಗೆ ಬಂದಿರಲಿಲ್ಲವೋ, ಅಥವಾ ವಿದ್ಯಾರ್ಥಿ ನಾಯಕರಲ್ಲಿ ಹೆಚ್ಚಿನವರು ತೆಲುಗರಾಗಿದ್ದರೋ ತಿಳಿಯದು. ಭಾಷೆ ಯಾವುದಾದರೇನು? ಒಟ್ಟಾರೆ ಆಗಬೇಕಿರುವುದು ಪರಕೀಯರಿಂದ ದೇಶದ ವಿಮೋಚನೆ ತಾನೆ? ಯಾರೂ ಇದರ ಬಗ್ಗೆ ಚಿಂತಿಸಲಿಲ್ಲ. ಒಟ್ಟಾರೆ ವಿದ್ಯಾರ್ಥಿ ವೃಂದದಲ್ಲಿ ದೇಶಪ್ರೇಮದ, ಸ್ವಾತಂತ್ರ್ಯ ಹೋರಾಟದ ಕಾವು ನಿರಂತರ ಸಾಗಿತು.

ಇಷ್ಟೆಲ್ಲ ವಿದ್ಯಾರ್ಥಿಗಳು ಕೊನೆಗೆ ಹೋಗಿದ್ದಾದರೂ ಎಲ್ಲಿಗೆ? ಅದೇ ಬನಪ್ಪ ಪಾರ್ಕ್‌ಗೆ. ಅಂದು ೧.೩೦ರ ಮಟಮಟ ಮದ್ಯಾಹ್ನ ಈ ಮೈದಾನದಲ್ಲಿ ಬರೋಬ್ಬರಿ ೧೨ ಸಾವಿರ ವಿದ್ಯಾರ್ಥಿಗಳು ಒಟ್ಟು ಸೇರಿದರು. ಕೆ.ವಿ. ವಸಂತಯ್ಯ, ದೀನದಯಾಳು ನಾಯ್ಡು ಹಾಗೂ ಕೆ.ಕೃಷ್ಣಮೂರ್ತಿ ಅವರುಗಳು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ಗಾಂಧೀಜಿಯವರ ಬಿಡುಗಡೆ ಆಗುವವರೆಗೂ ಹೋರಾಟವನ್ನು ಮುಂದುವರಿಸಬೇಕು ಎಂದು ಸಂಕಲ್ಪ ಮಾಡಿದರು.

ಅಂದು ಮಿನರ್ವ ಮಿಲ್ ಕಾರ್ಮಿಕರು ಪ್ರತಿಭಟನೆಯ ಸೂಚಕವಾಗಿ ಒಂದು ಗಂಟೆ ಕೆಲಸ ಸ್ಥಗಿತಗೊಳಿಸಿದರು. ಮಾರನೆಯ ದಿನ ಬಿನ್ನಿ ಮಿಲ್ ಕಾರ್ಮಿಕರೂ ಒಂದುಗಂಟೆ ಕೆಲಸ ಸ್ಥಗಿತ ಮಾಡಿ, ರಾಷ್ಟ್ರೀಯ ನಾಯಕರ ಬಂಧನವನ್ನು ಪ್ರತಿಭಟಿಸಿದರು. ಆಗಸ್ಟ್ ೧೦ರಂದು ಸೆಂಟ್ರಲ್ ಕಾಲೇಜಿನ ಕ್ರಿಕೆಟ್ ಪೆವಿಲಿಯನ್‌ನಲ್ಲಿ ಮತ್ತೊಂದು ಬೃಹತ್ ಸಮಾವೇಶ ನಡೆಯಿತು. ಅಲ್ಲಿಯೂ ಬಹುತೇಕ ೧೨ ಸಾವಿರದಷ್ಟು ಸೇರಿದ್ದ ವಿದ್ಯಾರ್ಥಿಗಳು ಕೆ.ವಿ. ವಸಂತಯ್ಯ ಅವರ ಮಾತುಗಳನ್ನು ಆಲಿಸುತ್ತಿದ್ದರು. ಪ್ರತಿಭಟನೆಯನ್ನು ಮುಂದುವರಿಸೋಣ ಎಂದು ಪುನರುಚ್ಚರಿಸಲಾಯಿತು. ಅಂದು ಬನಪ್ಪ ಪಾರ್ಕ್‌ನಲ್ಲಿಯೂ ಸಭೆ ನಡೆಯಿತು. ಆ ಸಭೆಯ ನೇತೃತ್ವವನ್ನು ಹೊಸಕೋಟೆ ಮಹಾದೇವ ಶಾಸ್ತ್ರಿ ವಹಿಸಿದ್ದರು. ಕೆ. ರಾಮಸ್ವಾಮಿ ಅವರು, ದೇಶದ ಜನತೆ

ಹಾಗೂ ಬ್ರಿಟಿಷ್ ಸರ್ಕಾರಕ್ಕೆ ಸಂದೇಶ ನೀಡಲು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸೂಚಿಸಿದ್ದ ೧೩ ಅಂಶಗಳ ಕಾರ್ಯಕ್ರಮವನ್ನು ಎಲ್ಲರಿಗೂ ಕೇಳುವಂತೆ ಓದಿದರು.

ಆಗಸ್ಟ್ ೧೨ರಂದು ಬಿನ್ನಿ ಮಿಲ್, ಸರ್ಕಾರಿ ಮುದ್ರಣಾಲಯ, ಪ್ರೋಸೆಲೀನ್ ಫ್ಯಾಕ್ಟರಿ ಹಾಗೂ ಆಮ್ಕೊ ಬ್ಯಾಟರಿ ಕಾರ್ಖಾನೆಗಳ ಕಾರ್ಮಿಕರೂ ಮುಷ್ಕರಕ್ಕಿಳಿದರು. ಪ್ರತಿಭಟನೆಯಲ್ಲೆ ಮುಂದುವರಿಯೋಣ ಎಂಬ ನಿರ್ಧಾರವನ್ನು ಮೈಸೂರು ಸ್ಪಿನ್ನಿಂಗ್ ಮಿಲ್‌ಕಾರ್ಮಿಕರು ಕೈಗೊಂಡರು. ಈಗ ಹಿಂದೂಸ್ಥಾನ ಏರೋನಾಟಿಕ್ಸ್ ಲಿಮಿಟೆಡ್ ಎಂದಾಗಿರುವ, ಅಂದು ಹಿಂದೂಸ್ಥಾನ್ ಏರ್‌ಕ್ರಾಫ್ಟ್ ಫ್ಯಾಕ್ಟರಿ ಕಾರ್ಮಿಕರು ಸಂಪಂಗಿ ಕೆರೆಯಲ್ಲಿ ಸಮಾವೇಶ ಏರ್ಪಡಿಸಿದ್ದರು, ಅಲ್ಲಿ ಸುಮಾರು ೪ ಸಾವಿರ ಜನರು ಸೇರಿದ್ದರು. ಮೆಡಿಕಲ್ ಕಾಲೇಜು ಹಾಗೂ ಮಹಾರಾಣಿ ಕಾಲೇಜುಗಳು ಅಂದೂ ಮುಚ್ಚಿದ್ದವು. ಬಿನ್ನಿ ಮಿಲ್ ಕಾರ್ಮಿಕರು ಆಯೋಜಿಸಿದ್ದ ಸಮಾವೇಶದಲ್ಲಿ ೪ ಸಾವಿರಜನರು ಹಾಗೂ ಮಿನರ್ವ ಮಿಲ್ ಕಾರ್ಮಿಕರ ಕಾರ್ಯಕ್ರಮದಲ್ಲಿ ಸುಮಾರು ೬೦೦ ಜನರು ಭಾಗವಹಿಸಿದರು.

ಎಐಸಿಸಿ ಅಧಿವೇಶನ ಮುಗಿಸಿ ಬಾಂಬೆಯಿಂದ ಆಗಮಿಸುತ್ತಿದ್ದ ಕಾಂಗ್ರೆಸ್ ನಾಯಕರಾದ ಕೆ.ಟಿ. ಭಾಷ್ಯಮ್, ಎನ್.ಸಿ. ತಿಮ್ಮಾರೆಡ್ಡಿ, ಮೈಸೂರು ಕಾಂಗ್ರೆಸ್ ಅಧ್ಯಕ್ಷ ತಳಕೆರೆ ಸುಬ್ರಹ್ಮಣ್ಯ ಮುಂತಾದವರನ್ನು ಯಶವಂತಪುರ ರೈಲ್ವೆ ನಿಲ್ದಾಣದಲ್ಲಿ ಬಂಧಿಸಲಾಯಿತು.

ಆಗಸ್ಟ್ ೧೩ರಂದು ಬೆಳಗ್ಗೆ ಬಿನ್ನಿ ಮಿಲ್, ಮೈಸೂರು ಸ್ಪಿನ್ನಿಂಗ್ ಮಿಲ್, ಮಿನರ್ವ ಮಿಲ್ ಹಾಗೂ ಟಿ.ಆರ್. ಮಿಲ್ ಕಾರ್ಮಿಕರು ಕೆಲಸ ಸ್ಥಗಿತಗೊಳಿಸಿ ಮೆರವಣಿಗೆ ಏರ್ಪಡಿಸಿದರು. ಧರ್ಮಾಂಬುಧಿ ಕೆರೆಯ ಏರಿಯ ಮೇಲಿದ್ದ ಒಂದು ಸೇಂದಿ ಅಂಗಡಿಯ ಮೇಲೆ ಕೆಲವರು ದಾಳಿ ಮಾಡಿದರು. ಎಲ್ಲ ಮಿಲ್ ಕಾರ್ಮಿಕರನ್ನೊಳಗೊಂಡ ಸಮಾವೇಶದಲ್ಲಿ ಸುಮಾರು ೮ ಸಾವಿರ ಜನರು ಭಾಗವಹಿಸಿದರು. ಮುಂದಿನ ನೋಟಿಸ್‌ವರೆಗೆ ಹಿಂದೂಸ್ಥಾನ್ ಏರ್‌ಕ್ರಾಫ್ಟ್ ಫ್ಯಾಕ್ಟರಿಯನ್ನು ಬಂದ್ ಎಂದು ಘೋಷಿಸಲಾಯಿತು. ಸರ್ಕಾರಿ ವಿದ್ಯುತ್ ಕಾರ್ಖಾನೆ, ಆಮ್ಕೊ ಬ್ಯಾಟರಿ, ಮೈಸೂರು ಟ್ಯಾನರಿ, ಹೊಸೈರೀಸ್ ಫ್ಯಾಕ್ಟರಿಗಳು, ಐಟಿಎಲ್, ಮಹಾಲಕ್ಷ್ಮೀ ಮಿಲ್ಸ್, ಸೂರ್ಯೋದಯಾಸ್ ಮಿಲ್ಸ್, ಸರ್ಕಾರಿ



ಗಾಜಿನ ಕಾರ್ಖಾನೆ ಮುಂತಾದೆಡೆ ಪ್ರತಿಭಟನೆಗಳು ಮುಂದುವರಿದವು. ವಕೀಲರ ಸಂಘದಿಂದಲೂ ಪ್ರತಿಭಟನಾ ಸಭೆ ಏರ್ಪಡಿಸಲಾಯಿತು, ಸುಮಾರು ೯೦ ಜನರು ಇದರಲ್ಲಿ ಭಾಗವಹಿಸಿ, ಒಂದು ವಾರದವರೆಗೆ ನ್ಯಾಯಾಲಯ ಕಲಾಪಗಳನ್ನು ಸ್ಥಗಿತಗೊಳಿಸುವಂತೆ ಕಾನೂನು ಸಚಿವರಿಗೆ ಮನವಿ ಮಾಡಿದರು.

ಆಗಸ್ಟ್ ೧೪ರಂದು ಮೈಸೂರು ಮಿಲ್ ಕಾರ್ಮಿಕರು ಖಾದ್ಯತೈಲ ಕಾರ್ಖಾನೆ ಬಳಿ ತೆರಳಿ, ಅಲ್ಲಿನ ಕಾರ್ಮಿಕರೂ ಪ್ರತಿಭಟನೆಯಲ್ಲಿ ಭಾಗವಹಿಸಲು ಮನವೊಲಿಸಿದರು. ಮೈಸೂರು ಲ್ಯಾಂಪ್ಸ್ ಕಾರ್ಮಿಕರೂ ಕೆಲಸ ಸ್ಥಗಿತಗೊಳಿಸಿದರು. ಪ್ರತಿಭಟನೆಯಲ್ಲಿ ತೊಡಗಿದ್ದ ಹಿಂದೂಸ್ಥಾನ್ ಏರ್‌ಕ್ರಾಫ್ಟ್ ಫ್ಯಾಕ್ಟರಿ ಕಾರ್ಮಿಕರು ಅಂದು ಬನಪ್ಪ ಪಾರ್ಕ್‌ನಲ್ಲಿ ಬೃಹತ್ ಸಭೆಯೊಂದನ್ನು ಏರ್ಪಡಿಸಿದರು. ತಮ್ಮ ಬೇಡಿಕೆ ಈಡೇರುವವರೆಗೂ ಅಲ್ಲಿಂದ ಹಿಂತೆಗೆಯದಿರಲು ನಿರ್ಧರಿಸಿದರು. ಅಂದು ಸೆಂಟ್ರಲ್ ಕಾಲೇಜು ಕ್ರಿಕೆಟ್ ಪೆವಿಲಿಯನ್‌ನಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಸುಮಾರು ೨೫–೩೦ ಸಾವಿರ ವಿದ್ಯಾರ್ಥಿಗಳು ಭಾಗವಹಿಸಿದರು.

ಅಂದಿನ ದಿನವೇ ಕಾಂಗ್ರೆಸ್ ನಾಯಕರೂ ಬನಪ್ಪ ಪಾರ್ಕ್‌ನಲ್ಲಿ ಸಭೆಗಳನ್ನು ಏರ್ಪಡಿಸಿದರು. ಇನ್ನೊಂದೆಡೆ ಕಾರ್ಮಿಕರು ಮುನಿಸಿಪಲ್ ಗಾರ್ಡನ್‌ನಲ್ಲಿ ಸಭೆ ನಡೆಸಿದರು. ಅಷ್ಟರ ವೇಳೆಗಾಗಲೆ ಬಹುತೇಕ ಮುಂಚೂಣಿ ನಾಯಕರನ್ನು ಬಂಧಿಸಲಾಗಿತ್ತು.

ಆಗಸ್ಟ್ ೧೫ರಂದು ಮತ್ತೊಂದು ಆಘಾತಕರ ಸುದ್ದಿ ಕಿವಿಗೆ ಬಿದ್ದಿತು. ಬಂಧಿಸಲ್ಪಟ್ಟಿದ್ದ, ಗಾಂಧೀಜಿಯವರ ಅತ್ಯಾಪ್ತ ಸಹಾಯಕ ಮಹಾದೇವ ದೇಸಾಯಿಯವರು ಪುಣೆಯ ಜೈಲಿನಲ್ಲೆ ನಿಧನರಾಗಿದ್ದರು. ಗಾಂಧೀಜಿ, ನೆಹರೂ ಮುಂತಾದವರನ್ನೂ ಈ ವೇಳೆಗಾಗಲೆ ಬಂಧಿಸಲಾಗಿತ್ತು. ಇವರನ್ನು ಅದೆಲ್ಲೊ ದೂರದ ಜಾಗಕ್ಕೆ ಕೊಂಡೊಯ್ಯಲಾಗಿದೆ ಎಂದು ಕೆಲವರು ಹೇಳಿದರೆ, ಈಗಾಗಲೆ ಅವರನ್ನು ಗುಂಡಿಟ್ಟು ಹತ್ಯೆ ಮಾಡಲಾಗಿದೆ, ಸುದ್ದಿ ಪತ್ರಿಕೆಗಳ ಮೇಲೆ ಸೆನ್ಸರ್ ಇರುವುದರಿಂದ ಅವರು ಪ್ರಕಟಿಸಿಲ್ಲ ಅಷ್ಟೆ ಎಂಬ ಸುದ್ದಿಗಳೂ ಹರಿದಾಡಿ ಬೆಂಗಳೂರು ಸೇರಿ ದೇಶದೆಲ್ಲೆಡೆ ಪ್ರತಿಭಟನಾ ನಿರತರಲ್ಲಿ ಆತಂಕ ಮನೆಮಾಡಿತು. ಜನರು ದಂಗೆ ಎದ್ದುಬಿಡುತ್ತಾರೆಯೇ ಎನ್ನುವಷ್ಟು ವಾತಾವರಣ ಬಿಗುವಿನಿಂದ

ಕೂಡಿತು. ಬಂಧಿಸಲಾಗಿರುವ ತಮ್ಮ ನಾಯಕ ಚೆಲ್ಲಂ ಅವರನ್ನು ಬಿಡುಗಡೆ ಮಾಡಬೇಕು ಎಂದು ಬೆಂಗಳೂರು ಟ್ರಾನ್ಸ್‌ಪೋರ್ಟ್ ಕಂಪನಿ ಕಾರ್ಮಿಕರು ಅಂದೇ ಕೆಲಸ ಸ್ಥಗಿತಗೊಳಿಸಿದರು. ಎಲ್ಲೆಡೆ ಪ್ರತಿಭಟನೆಗಳು ನಡೆಯುತ್ತಿರುವುದರಿಂದ ಸಾರಿಗೆ ವಾಹನಗಳನ್ನು ಚಲಾಯಿಸುವುದು ಕಷ್ಟವಾಗುತ್ತದೆ, ಹಾಗಾಗಿ ಒಂದು ವಾರ ರಜೆ ನೀಡಬೇಕು ಎಂದು ಒತ್ತಾಯಿಸಿದರು. ಗಾಂಧೀಜಿ, ಅಂದಿನ ಮುನಿಸಿಪಾಲಿಟಿ ಅಧ್ಯಕ್ಷರೂ ಆಗಿದ್ದ ಕೆಂಗಲ್ ಹನುಮಂತಯ್ಯ, ಹಾಗೂ ಇಬ್ಬರು ಮುನಿಸಿಪಲ್ ಸದಸ್ಯರ ಬಂಧನವನ್ನು ವಿರೋಧಿಸಿ ಆಗಸ್ಟ್ ೧೫ರ ಮುನಿಸಿಪಾಲಿಟಿ ಸಭೆಯನ್ನು ಮುಂದೂಡಲಾಯಿತು. ಎಲ್.ಎಸ್. ರಾಜು ಹಾಗೂ ವೆಂಕಟಸ್ವಾಮಿಚೆಟ್ಟಿ ಅವರು ಪ್ರಸ್ತಾವನೆಯನ್ನು ಮಂಡಿಸಿದರು. ಮುನಿಸಿಪಾಲಿಟಿ ಸದಸ್ಯರಾದ ಡಾ. ಕಮಲಾ ರಾಮಚಂದ್ರ ಹಾಗೂ ಬಿ. ನರಸಿಂಹಯ್ಯ ಅವರುತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು.

ಇದೇ ನಡುವೆ ಬನಪ್ಪ ಪಾರ್ಕ್‌ನಲ್ಲಿ ಸಾರ್ವಜನಿಕ ಸಭೆಯೊಂದು ನಡೆಯುತ್ತಿದ್ದಾಗ, ಎಲ್ಲ ರೀತಿಯ ಸಾರ್ವಜನಿಕ ಸಭೆ ಸಮಾರಂಭಗಳನ್ನೂ ನಿಷೇಧಿಸಿ ಆದೇಶ ಹೊರಡಿಸಲಾಗಿದೆ ಎಂದು ಸಿಟಿ ಮ್ಯಾಜಿಸ್ಟ್ರೇಟ್ ಸೂಚನೆ ನೀಡಿದರು. ಪ್ರತಿಭಟನಾಕಾರರೆಲ್ಲರೂ ಹೊರಡುವಂತೆ ಮುಖಂಡರು ಸೂಚಿಸಿದರಾದರೂ ಅನೇಕರು ಅಲ್ಲಿಯೇ ಉಳಿದು ರಸ್ತೆಗಿಳಿದರು. ವಾಹನ ಸವಾರರಿಗೆ ಇದರ ಬಿಸಿ ಮುಟ್ಟಿತು. ಪೊಲೀಸರು ಲಘು ಲಾಠಿ ಪ್ರಹಾರಮಾಡಿ ರಸ್ತೆಯಲ್ಲಿದ್ದವರನ್ನು ಚದುರಿಸಿದರು. ಪ್ರತಿಭಟನಾಕಾರರು ತೆರಳುತ್ತಿರುವಂತೆ ಅವರುಗಳ ನಡುವೆ ಕೆಲವು ರೌಡಿಗಳು ನುಸುಳಿಕೊಂಡುಬಿಟ್ಟರು. ಕೆಂಪೇಗೌಡ ರಸ್ತೆಯ ಅನೇಕ ಕಟ್ಟಡಗಳ ಮೇಲೆ ಕಲ್ಲುತೂರಾಟ ಮಾಡಿ ಹಾನಿ ಮಾಡಿದರು. ದೂರವಾಣಿ ತಂತಿಗಳನ್ನು ಕತ್ತರಿಸಿದರು. ಬನಪ್ಪ ಪಾರ್ಕ್ ಸಭೆಯಲ್ಲಿ ತುಮಕೂರಿನಿಂದ ರೈಲಿನ ಮೂಲಕ ಬಂದಿದ್ದ ಬೃಹತ್ ಪ್ರಮಾಣದ ಜನರೂ ಇದರಲ್ಲಿ ಪಾಲ್ಗೊಂಡಿದ್ದರು. ಇಷ್ಟೇ ಅಲ್ಲದೆ ಯಲಹಂಕ, ಕೆಂಗೇರಿ, ಆನೇಕಲ್ ಮುಂತಾದ ಗ್ರಾಮೀಣ ಪ್ರದೇಶಗಳಲ್ಲೂ ಪ್ರತಿಭಟನೆಗಳು ನಡೆದವು.

ಅಂದಿನ ಕೆಂಪೇಗೌಡರಸ್ತೆ ಇಂದಿನ ರೀತಿ ಕಟ್ಟಡಗಳಿಂದ ಅವೃತವಾಗಿ, ಒಂದಿಂಚು ಜಾಗಕ್ಕೂ ಕಚ್ಚಾಡುವ ಸ್ಥಿತಿ ಇರಲಿಲ್ಲ. ಇಡೀ ಕೆಂಪೇಗೌಡ ರಸ್ತೆಯಲ್ಲಿ



ಇದ್ದದ್ದು ಬಿವಿಕೆ ಅಯ್ಯಂಗಾರ್ ಅವರೊಬ್ಬರದ್ದೇ ಮನೆ. ಮಾರ್ಗದ ಬದಿಯಲ್ಲಿ ದೊಡ್ಡ ದೊಡ್ಡ ಮರಗಳ ಬಳಿ ನಡೆದುಕೊಂಡು ಹೋಗುತ್ತಿದ್ದರೆ ಗ್ರಾಮೀಣ ಪ್ರದೇಶದ ಉಲ್ಲಾಸ ವಾತಾವರಣವಿತ್ತು.

## ಗೋಲಿಬಾರ್ ಮತ್ತು ಸಾವುಗಳು

ಮಹದೇವ ದೇಸಾಯಿ ಅವರ ನಿಧನದ ವಿಚಾರ ತಣ್ಣಗಾಗದೆ ಗಂಭೀರತೆಯನ್ನು ಪಡೆಯುತ್ತಲೇ ಸಾಗಿತು. ಆಗಸ್ಟ್ ೧೬ ಹಾಗೂ ೧೭ರಂದು ಪರಿಸ್ಥಿತಿ ವಿಕೋಪಕ್ಕೆ ತಿರುಗಿ ಗೋಲಿಬಾರ್ ನಡೆಯಿತು, ಕರ್ಫ್ಯೂ ವಿಧಿಸಲಾಯಿತು. ಜನರನ್ನು ನಿಯಂತ್ರಿಸಲು ಕುದುರೆ ದಳವನ್ನು ನಿಯೋಜನೆ ಮಾಡಲಾಯಿತು. ಆದರೂ ಜನ ಮಣಿಯಲಿಲ್ಲ. ಗುಂಪು ಚದುರಿಸಲಾಗದೆ ಲಾಠಿ ಬೀಸಿದ್ದೇ ಬೀಸಿದ್ದು, ಟಿಯರ್‌ಗ್ಯಾಸ್ ಶೆಲ್‌ಗಳನ್ನು ಸಿಡಿಸಿದರು. ಛೇಂಬರ್ ಆಫ್ ಕಾಮರ್ಸ್‌ನ (ಈಗಿನ ಎಫ್‌ಕೆಸಿಸಿಐ) ಹಿಂದೆ ಇದ್ದ ಗಲ್ಲಿಗಳಲ್ಲೆಲ್ಲ ಜನ ಅವಿತಿಟ್ಟುಕೊಂಡರು. ಪೊಲೀಸರು ಕೊಂಚ ಮರೆಯಾದರೆ ಸಾಕು ಹೊರಗೆ ಬಂದು ಕಲ್ಲು ತೂರಿದರು. ಈ ಗದ್ದಲ ತಡೆಯುವುದು ಸಾಧ್ಯವಾಗಲೇ ಇಲ್ಲ. ಸಂಜೆಯ ಹೊತ್ತಿಗೆ ಮೈಸೂರು ಅಶ್ವದಳವನ್ನು (ಲ್ಯಾನ್ಸರ್) ಕರೆಸಿಕೊಂಡರು.

ಆ ದಿನಗಳಲ್ಲಿ ಪೊಲೀಸರಿಗೆ ಈಗಿರುವ ಹಾಗೆ ಬೆತ್ತದಿಂದ, ಫೈಬರ್‌ನಿಂದ ಮಾಡಿದ ಶೀಲ್ಡ್‌ಗಳಿರಲಿಲ್ಲ, ಗುರಾಣಿಗಳಿದ್ದವು. ಅವು ಕಲ್ಲು ತೂರಾಟವಾದಾಗ ತಾಳಿಕೊಳ್ಳುತ್ತಿರಲಿಲ್ಲ. ಪೊಲೀಸರು ಹಿಂದೆ ಸರಿಯಬೇಕಾಗುತ್ತಿತ್ತು. ಅದರಿಂದಾಗಿ ಎತ್ತರದಲ್ಲಿ ಕುದುರೆ ಮೇಲೆ ಕೂತು ಎದುರಿಸುವಂತೆ ಮೈಸೂರು ಲ್ಯಾನ್ಸರ್‌ನ ೫೦ ಸವಾರರು ಬಂದರು. ಕುದುರೆ ದಳ ಎರಗತೊಡಗಿದಾಗಲೂ ಜನರಿಗೆ ಹೊಸ ಉಪಾಯ ಹೊಳೆದಿತ್ತು. ಹತ್ತಿರದ ಗಲ್ಲಿಗಳಲ್ಲಿದ್ದ ಅಂಗಡಿ, ಗೋಡೌನ್‌ಗಳಲ್ಲಿ ಪೇರಿಸಿಟ್ಟಿದ್ದ ರಾಗಿ ಮೂಟೆಗಳನ್ನು ತಂದು ರಸ್ತೆಗೆ ಸುರಿದರು. ಕುದುರೆ ಕಾಲಿಗೆ ಲಾಳ ಹೊಡೆದಿರುತ್ತೆ. ಅವು ರಾಗಿ ಮೇಲೆ ಕಾಲಿಟ್ಟರೆ ಜಾರಿಬಿಡುತ್ತವೆ. ಆ ದಿನ ಕೆಲವು ಕುದುರೆಗಳಿಗೆ ಜಾರಿ ಬಿದ್ದು ಪೆಟ್ಟು ಆಗಿತ್ತು. ಕುದುರೆಗಳು ಜಾರಿ ಬೀಳುತ್ತಿದ್ದರಿಂದಾಗಿ ಅವರನ್ನು ಹಿಂದಕ್ಕೆ ಕರೆಸಿಕೊಳ್ಳಲಾಯಿತು. ದಂಡು ಪ್ರದೇಶದಲ್ಲಿ ಮಿಲಿಟರಿ ಪಡೆಗಳಿದ್ದವು. ಟಿಪ್ಪು ಸುಲ್ತಾನನು ಯುದ್ಧದಲ್ಲಿ ಸೋತ ಮೇಲೆ ಬ್ರಿಟಿಷರು ಮೈಸೂರಿನ ಅರಸರಾದ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಅಧಿಕಾರ

ಕೊಟ್ಟರು. ದಂಡು ಪ್ರದೇಶ ಮದರಾಸು ಪ್ರಾಂತ್ಯಕ್ಕೆ ಒಳಪಟ್ಟಿತ್ತು. ಅಲ್ಲಿ ಮಿಲಿಟರಿ ರೆಜಿಮೆಂಟ್ ಇತ್ತು. ಅಲ್ಲಿಂದ ಬರುತ್ತಿದ್ದ ಆದೇಶಗಳನ್ನು ಇಲ್ಲಿ ಜಾರಿಗೆ ತರಲಾಗುತ್ತಿತ್ತು. ಈಗ ಕುದುರೆ ದಳ ಹಿಂದೆ ಸರಿದಿದ್ದರಿಂದ ಪೊಲೀಸರ ಸಹಾಯಕ್ಕಾಗಿ ಮದರಾಸು ಮಿಲಿಟರಿಯವರು ಆರು ಆಟೋ ಮ್ಯಾಟಿಕ್ ಮಿಷನ್‌ಗನ್ ವ್ಯಾನ್‌ಗಳನ್ನು ಕಳಿಸಿದರು. ಈ ವ್ಯಾನ್‌ಗಳಿಗೆ ಸುತ್ತಲೂ ಕವರ್ ಇರುತ್ತದೆ. ಮೇಲೆ ಮಧ್ಯದಲ್ಲಿ ಒಬ್ಬ ಸಿಪಾಯಿ ಕುಳಿತಿರುತ್ತಾನೆ. ಗನ್ ಇರುತ್ತೆ. ಅದನ್ನ ೩೬೦ ಡಿಗ್ರಿವರೆಗೂ ತಿರುಗಿಸುವಂತೆ ಇರುತ್ತದೆ, ಮೇಲೆ–ಕೆಳಗೆ, ಎಡ–ಬಲಕ್ಕೆ ಕೂಡಾತಿರುಗಿಸುವ ಸೌಲಭ್ಯ ಇತ್ತು. ಈಗಿನ ಪೇಟನ್ ಟ್ಯಾಂಕ್ ರೀತಿಯದು. ಜನ ಎಲ್ಲಿ ಗುಂಪಾಗಿರುತ್ತಾರೊ ಆ ಕಡೆ ತಿರುಗಿಸಿ ಗುಂಡು ಹಾರಿಸುತ್ತಿದ್ದರು. ಸಂಜೆ ೬ ಗಂಟೆ ವೇಳೆಗೆ ಮೆಷಿನ್‌ಗನ್‌ಗಳಿಂದ ಗುಂಡು ಹಾರಿಸುವಂಥ ಕ್ರೌರ್ಯ ತೋರಿಸಿದರು. ಈ ಗೋಲಿಬಾರ್‌ನಲ್ಲಿ ತಿಮ್ಮಣ್ಣ ದಾಸ್ ಮತ್ತು ಪ್ರಹ್ಲಾದ ಶೆಟ್ಟಿ ಎಂಬ ಇಬ್ಬರು ಹೋರಾಟಗಾರು ವೀರ ಮರಣವನ್ನಪ್ಪಿದರು. ಕಾರ್ಮಿಕ ಮುಖಂಡರಾದ ವಿ.ಪಿ. ಮುನಿಸ್ವಾಮಿ ಹಾಗೂ ಜೆ. ಲಿಂಗಯ್ಯ ಸೇರಿ ಅನೇಕರನ್ನು ಬಂಧಿಸಿ, ನಗರದಾದ್ಯಂತ ಕರ್ಫ್ಯೂವನ್ನು ಮುಂದುವರಿಸಲಾಯಿತು.

ಈ ಗೋಲಿಬಾರ್ ನಡೆದದ್ದು ಸ್ಟೇಟ್ಸ್ ಚಿತ್ರಮಂದಿರ ಮತ್ತು ಛೇಂಬರ್ ಆಫ್ ಕಾಮರ್ಸ್ ನಡುವಿನ ಪ್ರದೇಶದಲ್ಲಿ. ಗೋಲಿಬಾರ್‌ನಿಂದ ಹೋರಾಟಗಾರರು ಮತ್ತಷ್ಟು ಕೆರಳಿದರು. ಮತ್ತೆ ಮುಂದಿನ ದಿನಗಳಲ್ಲಿ ಮೈಸೂರು ಬ್ಯಾಂಕ್ ವೃತ್ತ ಹಾಗೂ ಅವೆನ್ಯೂ ರಸ್ತೆಗಳಲ್ಲಿ ಬೃಹತ್ ಪ್ರಮಾಣದ ಜನರು ಸೇರಿ, ನಿಷೇಧಾಜ್ಞೆಯನ್ನು ಉಲ್ಲಂಘಿಸಿದರು. ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಲಾಠಿಚಾರ್ಜ್ ಮಾಡಿದ್ದಕ್ಕೆ ಪ್ರತಿಯಾಗಿ ಪ್ರತಿಭಟನಾಕಾರರು ಪೊಲೀಸರ ಮೇಲೆ ಕಲ್ಲುತೂರಿದರು. ಮತ್ತಷ್ಟು ಉದ್ವಿಗ್ನಗೊಂಡ ಹೋರಾಟಗಾರರು ಅವೆನ್ಯೂ ರಸ್ತೆ ಅಂಚೆ ಕಚೇರಿಗೆ ಬೆಂಕಿ ಹಚ್ಚಿದರು. ಚಿಕ್ಕಪೇಟೆ ಪೊಲೀಸ್ ಠಾಣೆಗೇ ಒಂದು ದೊಡ್ಡ ಗುಂಪು ನುಗ್ಗಿ ದಾಂಧಲೆ ನಡೆಸಿದ್ದರಿಂದ ೨೭ ಪೊಲೀಸರಿಗೆ ಗಾಯಗಳಾದವು.

ಸರ್ಕಾರದ ವಿರುದ್ಧ ಸುದ್ದಿಗಳನ್ನು ಪ್ರಸಾರವಾಗುವುದನ್ನು ತಡೆಯಲು ಮಾಧ್ಯಮಗಳ ಮೇಲೆ ಪ್ರತಿಬಂಧ ಹೇರಲಾಯಿತು. ಬೆಂಗಳೂರಿನ ಪತ್ರಿಕೆಗಳಾದ ವಿಶ್ವಕರ್ನಾಟಕ, ಡೈಲಿ ನ್ಯೂಸ್, ತಾಯಿನಾಡು ಮುಂತಾದ ಪತ್ರಿಕೆಗಳ ಸಂಪಾದಕರು, ಸೂಕ್ತ ಪತ್ರಿಕಾ ಸ್ವಾತಂತ್ರ್ಯ ದೊರಕುವವರೆಗೂ ಪತ್ರಿಕೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವ ನಿರ್ಧಾರ ಮಾಡಿದರು. ಇದಕ್ಕೂ ಎರಡು ದಿನ ಮೊದಲೇ ಪ್ರಜಾಮತ ವಾರಪತ್ರಿಕೆ ಹಾಗೂ ಜನವಾಣಿ ದಿನ ಪತ್ರಿಕೆಗಳೂ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದವು.



ಗೋಲಿಬಾರ್ ಮಾಡಿ ಇಬ್ಬರು ನಿಧನರಾಗಿರುವುದರಿಂದಾಗಿ, ಆಗಸ್ಟ್ ೧೭ರಂದು ಪರಿಸ್ಥಿತಿ ತಿಳಿಯಾಗುತ್ತದೆ ಎಂದು ಪೊಲೀಸರು ಭಾವಿಸಿದ್ದರು. ಆದರೆ ಅಂದು ಮತ್ತಷ್ಟು ಬೃಹತ್ ಸಂಖ್ಯೆಯಲ್ಲಿ ಮೈಸೂರು ಬ್ಯಾಂಕ್ ವೃತ್ತದಲ್ಲಿ ಜನರು ಸೇರಿ ದೂರವಾಣಿ ತಂತಿಗಳಿಗೆ ಹಾನಿ ಮಾಡಿದರು. ಕಾಟನ್‌ಪೇಟೆ ಅಂಚೆ ಕಚೇರಿ ಹಾಗೂ ಕೆಂಗೇರಿಗೇಟ್ ಪೊಲೀಸ್ ಠಾಣೆಗಳ ಮೇಲೆ ದಾಳಿಗಳು ನಡೆದವು. ನಗರ ಅಂಚೆ ಕಚೇರಿಗೆ ಬೆಂಕಿ ಹಚ್ಚಲಾಯಿತು, ಅದನ್ನು ನಂದಿಸಲು ಬಂದ ಅಗ್ನಿಶಾಮಕ ಸಿಬ್ಬಂದಿ ಮೇಲೆ ದಾಳಿ ಮಾಡಲಾಯಿತು. ಕಾಶೀ ವಿಶ್ವೇಶ್ವರ ದೇವಸ್ಥಾನದ ಬಳಿಯಿದ್ದ ಸರ್ಕಾರಿ ಗೋದಾಮಿನಲ್ಲಿದ್ದ ಎಲ್ಲ ವಸ್ತುಗಳನ್ನೂ ಎತ್ತಿಕೊಂಡು ಹೋಗಲಾಯಿತು. ನಗರ ಅಂಚೆ ಕಚೇರಿ, ಬಳೇಪೇಟೆ ವೃತ್ತ ಹಾಗೂ ಕಾಟನ್‌ಪೇಟೆಯಲ್ಲಿ ಗೋಲಿಬಾರ್ ನಡೆಯಿತು. ಈ ಗುಂಡಿನ ದಾಳಿಯಲ್ಲಿ ಒಟ್ಟು ೯ ಸ್ವಾತಂತ್ರ್ಯ ಹೋರಾಟಗಾರರ ಬಲಿದಾನವಾಯಿತು. ೧೫ ವರ್ಷದ ತಿಪ್ಪಯ್ಯ, ಅದೇ ಹರೆಯದ ಅಪ್ಪಯ್ಯ, ೧೬ ವರ್ಷದ ಎಚ್.ಆರ್. ಶ್ರೀನಿವಾಸನ್, ೩೫ ವರ್ಷದ ನಾರಾಯಣಾಚಾರ್ ಅಥವಾ ನಾರಾಯಣದಾಸ್, ೨೫ ವರ್ಷದ ಸುಬ್ಬಾಸಿಂಗ್ ರಾಮಸಿಂಗ್ ಹಾಗೂ ೧೬ ವರ್ಷದ ಪೊನ್ನುಸ್ವಾಮಿ ಅವರನ್ನು ಹೊರತುಪಡಿಸಿ ಉಳಿದ ಮೂವರ ಗುರುತು ಸಿಕ್ಕಲಿಲ್ಲ. ಈ ಗುಂಡಿನ ದಾಳಿಯಲ್ಲಿ ಒಟ್ಟಾರೆ ೩೯ ಜನರಿಗೆ ಗಾಯಗಳಾದವು. ಗಾಯವಾಗಿದ್ದ ಮತ್ತೊಬ್ಬ ವ್ಯಕ್ತಿ ಆಗಸ್ಟ್ ೨೫ರಂದು ಮೃತಪಟ್ಟರು.

ಇಷ್ಟೆಲ್ಲ ನಡೆಯುತ್ತಿರುವುದನ್ನು ನೋಡುತ್ತಲಿದ್ದ ಬೆಂಗಳೂರಿನ ಖ್ಯಾತ ವಕೀಲರಾದ ಎನ್. ಕೇಶವ ಅಯ್ಯಂಗಾರ್ ಅವರು ಮೈಸೂರು ಮಹಾರಾಜರಿಗೆ ಖಾರವಾಗಿ ಪತ್ರ ಬರೆದರು. "ಬ್ರಿಟಿಷ್ ಸರ್ಕಾರದ ಜತೆಗೆ ಮಾಡಿಕೊಂಡಿರುವ

ಎಲ್ಲ ಒಪ್ಪಂದಗಳನ್ನೂ ನೀವು ತಿರಸ್ಕರಿಸಬೇಕು ಹಾಗೂ ಬ್ರಿಟಿಷರು ತಮ್ಮ ಪ್ರತಿನಿಧಿಗಳ ಮೂಲಕ ಇಲ್ಲಿನ ಆಡಳಿತದಲ್ಲಿ ಮೂಗು ತೂರಿಸುವುದನ್ನು ತಡೆಯಬೇಕು ಎಂಬುದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ತೀರ್ಮಾನವಾಗಿದೆ...” ಎಂದು ತಿಳಿಸಿದ್ದರು. ಇಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆ ಆಗಬೇಕು ಹಾಗೂ ಎಲ್ಲ ರಾಜಕೀಯ ಬಂಧಿಗಳನ್ನೂ ಬಿಡುಗಡೆ ಮಾಡಬೇಕು ಎಂದಿತ್ತು. ಈ ಪತ್ರವನ್ನು ಬಹಿರಂಗವಾಗಿ ರಾಜ್ಯದ ಅನೇಕ ಸಾರ್ವಜನಿಕ ಸ್ಥಳಗಳಲ್ಲಿ ಭಿತ್ತಿಪತ್ರದಂತೆ ಅಂಟಿಸಲಾಯಿತು.

ಆಗಸ್ಟ್ ೧೮ರಂದು ರಾಮನಾರಾಯಣ ಚೆಲ್ಲಾರಾಮ್ ಅವರ ಅಧ್ಯಕ್ಷತೆಯ ಮೈಸೂರು ಪೀಸ್‌ಗೂಡ್ಸ್ ಅಸೋಸಿಯೇಷನ್ ಸಭೆಯೊಂದನ್ನು ನಡೆಸಿ, ಬಂಧಿತ ನಾಯಕರನ್ನು ಬಿಡುಗಡೆ ಮಾಡಬೇಕು ಹಾಗೂ ಪ್ರತಿಭಟನೆಗಳಿಗೆ ಹೇರಿರುವ ನಿರ್ಬಂಧವನ್ನು ಹಿಂಪಡೆಯಬೇಕು, ಕರ್ಫ್ಯೂ ತೆರವುಗೊಳಿಸಬೇಕು ಎಂಬಂತಹ ಪ್ರಸ್ತಾವನೆಗಳನ್ನು ಅಂಗೀಕರಿಸಿತು.

ಆಗಸ್ಟ್ ೧೭ರ ಅಂತ್ಯದ ವೇಳೆಗೆ ನಗರ ಬಹಳಷ್ಟು ಶಾಂತಿಯಾಗಿರುವಂತೆ ಕಂಡುಬಂದಿತು. ಬಹಳಷ್ಟು ಉದ್ಯಮ, ವ್ಯಾಪಾರಗಳು ಪುನರಾರಂಭವಾದವು. ಒಂದುವಾರದ ವೇಳೆಗೆ ಕಾರ್ಮಿಕರ ಹಾಜರಾತಿಯಲ್ಲೂ ಸಾಕಷ್ಟು ಸುಧಾರಣೆ ಕಂಡುಬಂದಿತು. ಎಲ್ಲ ಮಿಲ್‌ಗಳಲ್ಲೂ ಪೊಲೀಸ್ ಪಿಕೆಟಿಂಗ್‌ಗಳನ್ನು ಹಿಂಪಡೆಯಲಾಯಿತು. ಇನ್ನೇನು ಎಲ್ಲ ಪರಿಸ್ಥಿತಿ ತಮ್ಮ ಹಿಡಿತಕ್ಕೆ ಬಂದಿತು ಎಂದು ಪೊಲೀಸರು ನಿಟ್ಟುಸಿರು ಬಿಡುವ ವೇಳೆಗೆ ಮತ್ತೊಂದು ಅಲೆಯ ಹೋರಾಟ ಆರಂಭವಾಗಿತ್ತು. ಆಗಸ್ಟ್ ೨೪ರಂದು ಹಿಂದೂಸ್ಥಾನ್ ಏರ್‌ಕ್ರಾಫ್ಟ್ ಕಾರ್ಖಾನೆಯಲ್ಲಿ ಬೃಹತ್ ಪ್ರಮಾಣದ ಪ್ರತಿಭಟನೆ ನಡೆಯಿತು, ಆಗಸ್ಟ್ ೨೬ರಂದು ಮೈಸೂರು ಮಿಲ್‌ನಲ್ಲೂ ಪ್ರತಿಭಟನೆ ನಡೆಯಿತು. ಆಗಸ್ಟ್ ೨೫ರಂದು ಕನ್ನಡ ಪತ್ರಕರ್ತರಾದ ತಿ.ತಾ. ಶರ್ಮಾ, ಬಿ.ಎನ್. ಗುಪ್ತಾ ಹಾಗೂ ಎಸ್. ಕೃಷ್ಣ ಶರ್ಮಾ ಅವರನ್ನು ಬಂಧಿಸಲಾಯಿತು.

### ಭೂಗತ ಹೋರಾಟ

ಇಷ್ಟೆಲ್ಲ ಹೋರಾಟ ನಡೆಯುವ ವೇಳೆಗೆ ಬೆಂಗಳೂರಿನ ಸ್ವಾತಂತ್ರ್ಯ ಹೋರಾಟಗಾರರು ಒಂದು ಸಂಘಟನೆಯ ಸ್ವರೂಪ ಪಡೆದುಕೊಂಡರು.



ಮೈಸೂರು ರಾಜ್ಯದಲ್ಲಿ ಸ್ವಾತಂತ್ರ್ಯ ಹೋರಾಟವನ್ನು ಮುನ್ನಡೆಸಿಕೊಂಡು ಹೋಗಲು ಒಂದು ಭೂಗತ ಕಚೇರಿಯನ್ನು ಆರಂಭಿಸಲಾಯಿತು. ಈ ಚಟುವಟಿಕೆಗಳ ನೇತೃತ್ವವನ್ನು ನಿಟ್ಟೂರು ಶ್ರೀನಿವಾಸ ರಾವ್ ಹಾಗೂ ಎಚ್.ಆರ್. ವೆಂಕಟಾಚಲಯ್ಯ ಅವರುಗಳು ವಹಿಸಿದ್ದರು. ಎಂ.ಪಿ. ಎಲ್. ಶಾಸ್ತ್ರಿಯವರು ವಿವಿಧ ಭೂಗತ ಹೋರಾಟಗಾರರನ್ನು ಸಂಪರ್ಕಿಸುವ ಹಾಗೂ ಪರಸ್ಪರ ಮಾಹಿತಿ ವಿನಿಮಯ ಮಾಡುವ ಕೆಲಸ ಮಾಡುತ್ತಿದ್ದರು. ಎ.ಜಿ. ರಾಮಚಂದ್ರ ಅವರಿಗೆ ಸಹಾಯಕರಾಗಿ ಎಚ್.ಎಸ್. ಸೀತಾರಾಮ್, ಬುದ್ಧದಾಸ್, ಕೆ.ಎ. ವೆಂಕಟರಾಮಯ್ಯ, ಕೆ. ದೇವಯ್ಯ, ಪ್ರೇಮಚಂದ್, ವೈ.ವಿ. ರಾಮಚಂದ್ರ, ಎಚ್.ಎಸ್. ದೊರೆಸ್ವಾಮಿ, ಕುಂಟಲ ಮುಂತಾದವರಿದ್ದರು. ಇವರೆಲ್ಲರೂ ಭೂಗತ ಹೋರಾಟಗಾರರ ನಡುವಿನ ಸಮನ್ವಯ ಕಾರ್ಯದಲ್ಲಿ ತೊಡಗಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುವ ಸಲುವಾಗಿಯೇ ಎಂ.ಎಚ್. ಶಾಹ್ ಅವರು ಹಿಂದೂಸ್ಥಾನ್ ಏರ್‌ಕ್ರಾಫ್ಟ್ ಕಾರ್ಖಾನೆಯಲ್ಲಿದ್ದ ಉನ್ನತ ಹುದ್ದೆಗೆ ರಾಜೀನಾಮೆ ನೀಡಿದ್ದರು. ಆರ್. ಭದ್ರಣ್ಣ, ಕೆ. ಶ್ರೀನಿವಾಸ ರಾವ್ ಹಾಗೂ ಬಿ. ರಾಮಚಂದ್ರ ಅವರುಗಳು ಭೂಗತ ಪತ್ರಿಕೆಗಳನ್ನು ಹೊರತರುತ್ತಿದ್ದರು. ಕೆಂಗೇರಿಯಲ್ಲಿ ಜಿ.ಆರ್. ಸ್ವಾಮಿ ಅವರ ಮನೆಯೇ ಭೂಗತ ಹೋರಾಟಗಾರರು ಒಟ್ಟಿಗೆ ಸೇರಲು ಹಾಗೂ ಸ್ವಾತಂತ್ರ್ಯ ಹೋರಾಟದ ಮುಂದಿನ ದಾರಿಗಳ ಕುರಿತು ಆಗಾಗ್ಗೆ ಚರ್ಚಿಸಲು ನೆಲೆ ಕಲ್ಪಿಸಿಕೊಟ್ಟಿತ್ತು. ದೇಶದ ವಿವಿಧೆಡೆ ಭೂಗತ ಹೋರಾಟಗಾರರನ್ನು ಭೇಟಿ ಮಾಡುತ್ತ ಪ್ರವಾಸದಲ್ಲಿದ್ದ ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಬೆಂಗಳೂರಿನ ಪ್ರವಾಸದಲ್ಲಿದ್ದಾಗ ಇಲ್ಲಿಂದಲೇ ಅವರನ್ನು ಸೆಪ್ಟೆಂಬರ್ ೫ರಂದು ಬಂಧಿಸಲಾಯಿತು.

ನಿವೃತ್ತ ಸೈನಿಕ ಜನರಲ್ ಎಚ್.ಸಿ. ವೇಣುಗೋಪಾಲ್ ಅವರು ಎಚ್‌ಎಎಲ್‌ನಲ್ಲಿ ಉದ್ಯೋಗಿ ಯಾಗಿದ್ದಾಗಿನ ಈ ಸಂದರ್ಭದ ಘಟನೆಯೊಂದನ್ನು ಹೀಗೆ ವಿವರಿಸುತ್ತಾರೆ. “ಕ್ವಿಟ್ ಇಂಡಿಯಾ ಹೋರಾಟದಲ್ಲಿ ಭಾಗವಹಿಸಿ ಎಂಬ ಮಹಾತ್ಮಾ ಗಾಂಧಿಯವರ ಕರೆಯನ್ನುಯಾರೂ ನಿರಾಕರಿಸುವಂತಿರಲಿಲ್ಲ. ಎಚ್‌ಎಎಲ್‌ನಲ್ಲೂ ಪ್ರತಿಭಟನೆಗೆ ನಾವು ಕರೆ ನೀಡಿದೆವು. ಇಡೀ ಫ್ಯಾಕ್ಟರಿಯೇ ನಗರದ ಕಡೆಗೆ ದೊಡ್ಡ ಮೆರವಣಿಗೆ ಮೂಲಕ ಸಾಗಲು ಆರಂಭಿಸಿತು. ಎಚ್‌ಎಎಲ್ ಸ್ಥಾಪಕರಾದ ವಾಲ್‌ಚಂದ್ ಹೀರಾಚಂದ್ ಅವರ ಸಹೋದರ

ಸಂಬಂಧಿ ಹಾಗೂ ಸಂಸ್ಥೆಯ ಸಿಬ್ಬಂದಿ ಮತ್ತು ಯೋಜನಾ ವ್ಯವಸ್ಥಾಪಕರಾಗಿದ್ದ ಎಂ.ಎಚ್. ಶಾಹ್ ಅವರೇ ಇಡೀ ಮೆರವಣಿಗೆಯನ್ನು ಮುನ್ನಡೆಸಿದರು. ಕೆಲವೇ ನೂರು ಹೆಜ್ಜೆಗಳನ್ನಿಡುವಷ್ಟರಲ್ಲಿ, ಅಮೆರಿಕನ್ ಪ್ರಜೆಯಾಗಿದ್ದ ನಮ್ಮ ಪ್ರಧಾನ ವ್ಯವಸ್ಥಾಪಕ ಅಡ್ಡಿಯಾದ. ನಾವು ಎಲ್ಲಿಗೆ ಹೋಗುತ್ತಿದ್ದೇವೆ ಹಾಗೂ ಎಷ್ಟು ಹೊತ್ತಿಗೆ ಕೆಲಸಕ್ಕೆ ವಾಪಸಾಗುತ್ತೇವೆ ಎಂದು ತಿಳಿಸುವಂತೆ ಹೇಳಿದ. ಮಹಾತ್ಮಾ ಗಾಂಧೀಜಿಯವರನ್ನು ಬ್ರಿಟಿಷರು ಬಂಧಿಸಿದ್ದು, ಅವರನ್ನು ಕೂಡಲೆ ಬಿಡುಗಡೆ ಮಾಡಬೇಕು ಎಂದು ನಾವು ಘೋಷಣೆ ಕೂಗಿದೆವು. ಗಾಂಧಿ ಒಬ್ಬ ಮೂರ್ಖ. ನೀವು ಸುಮ್ಮನೆ ಕೆಲಸಕ್ಕೆ ಹೋಗಿ, ಇಲ್ಲವೆಂದರೆ ಕೆಲಸ ಕಳೆದುಕೊಳ್ಳಬೇಕಾಗುತ್ತದೆ ಎಂದ. ಇದರಿಂದ ಸಿಬ್ಬಂದಿಯೆಲ್ಲ ಕುದ್ದು ಹೋದರು. ಇನ್ನೇನು ಎಲ್ಲರಿಂದಲೂ ಪೆಟ್ಟು ತಿನ್ನಬೇಕು ಎನ್ನುವಷ್ಟರಲ್ಲಿ ಆತನ ಚಾಣಾಕ್ಷ ಕಾರು ಚಾಲಕ ಆತನನ್ನು ಕಾರಿನಲ್ಲಿ ಕೂರಿಸಿಕೊಂಡು ಕಾಲ್ಕಿತ್ತು ಬಚಾವು ಮಾಡಿದ. ಅಲ್ಲಿಂದ ನೇರವಾಗಿ ನಾವೆಲ್ಲರೂ ಬನಪ್ಪ ಪಾರ್ಕ್‌ಗೆ ತೆರಳಿದೆವು ಹಾಗೂ ಪ್ರಧಾನ ವ್ಯವಸ್ಥಾಪಕ ಗಾಂಧೀಜಿಯುವರನ್ನು ಅವಮಾನಿಸಿದ್ದಕ್ಕೆ ಕ್ಷಮೆ ಕೇಳುವವರೆಗೂ ಹಿಂದಿರುವುಗುವುದಿಲ್ಲ ಎಂದು ನಿರ್ಣಯ ಮಾಡಿದೆವು. ಹೋರಾಟ ಕೆಲವು ದಿನಗಳು ನಡೆಯಿತು. ಆದರೆ ಬಹಳಷ್ಟು ಸಿಬ್ಬಂದಿ ಅತ್ಯಂತ ಬಡವರಾಗಿದ್ದರಿಂದ ಮತ್ತು ಸಂಘಟನೆಯ ಕೊರತೆ ಇದ್ದದ್ದರಿಂದ ಸಡಿಲವಾಗುತ್ತ ಹೋಯಿತು. ಆದರೆ, ದೇಶವು ಸ್ವಾತಂತ್ರ್ಯ ಗಳಿಸುವವರೆಗೂ ಕೆಲಸಕ್ಕೆ ಹೋಗುವುದು ಬೇಡ ಎಂದು ನಾವು ಕೆಲವರು ದೃಢವಾಗಿ ನಿಂತೆವು. ಕೆಲಸವನ್ನು ತೊರೆದ ನಂತರ ಸಾಕಷ್ಟು ಕಷ್ಟ ಅನುಭವಿಸಬೇಕಾಯಿತು ಏಕೆಂದರೆ ನನ್ನ ಖರ್ಚು ವೆಚ್ಚಗಳಿಗಾಗಿ ಸಂಬಂಧಿಕರ ಮೇಲೆಯೇ ಅವಲಂಬನೆ ಆಗಬೇಕಾಯಿತು. ಎಂ.ಎಚ್. ಶಾಹ್ ಅವರೂ ತಮ್ಮ ಹುದ್ದೆಯನ್ನು ತ್ಯಜಿಸಿ ಪೂರ್ಣ ಪ್ರಮಾಣದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲೆ ತೊಡಗಿಸಿಕೊಂಡರು".

## ತವರುಮನೆಯೋ ಸೆರೆಮನೆಯೋ?

ಎರಡನೇ ವಿಶ್ವ ಯುದ್ಧದ ಸಮಯದಲ್ಲಿ ಬ್ರಿಟಿಷರು ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್–೧೯೩೯ ಜಾರಿಗೆ ತಂದರು. ಅದರ ಪ್ರಕಾರ, ಯುದ್ಧದ ಸಮಯದಲ್ಲಿ ಪ್ರಜೆಗಳನ್ನು ಸಹಾಯಕ್ಕೆ ಬಳಸಿಕೊಳ್ಳಲು ಯಾವುದೇ ನಿಯಮ



ರೂಪಿಸಲು ವೈಸರಾಯ್‌ಗೆ ಸರ್ವಾಧಿಕಾರ ನೀಡಲಾಯಿತು. ನಿಯಮಗಳನ್ನು ಅನುಸರಿಸದಿದ್ದರೆ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸುವ ಅಕಾಶವೂ ಇತ್ತು. ಈ ಪ್ರಕರಣಗಳ ವಿಚಾರಣೆಗೆಂದೇ ವಿಶೇಷ ನ್ಯಾಯಾಲಯ ಸ್ಥಾಪನೆ ಆಗುತ್ತವೆ, ಇಲ್ಲಿ ನೀಡುವ ತೀರ್ಪನ್ನು ಮೇಲಿನ ನ್ಯಾಯಾಲಯದಲ್ಲಿ ಪ್ರಶಿಸಲು ಅವಕಾಶ ಇರುವುದಿಲ್ಲ.

ಇಂತಹ, ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್ ವಿರೋಧಿಸಿ ಕಾರ್ಮಿಕ ಮುಖಂಡ ಜಿ. ಚೆಂಗಲಾರಾಧ್ಯ ಅವರ ನೇತೃತ್ವದಲ್ಲಿ ಸೆಪ್ಟೆಂಬರ್ ೭ರಂದು ಪ್ರತಿಭಟನಾ ಮೆರವಣಿಗೆ ನಡೆಯಿತು. 'ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್' ಪ್ರತಿಕೃತಿಯನ್ನು ತಯಾರಿಸಿ ಅದನ್ನು ಚಟ್ಟದ ಮೇಲಿಟ್ಟುಕೊಂಡು ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು.

ಮಸ್ತಾನ್‌ಸಾಬ್ ದರ್ಗಾದಿಂದ ಆರಂಭವಾದ ಈ ಮೆರವಣಿಗೆ ಕಾಟನ್‌ಪೇಟೆ ಮೂಲಕ ಮೆಜೆಸ್ಟಿಕ್ ಪ್ರದೇಶಕ್ಕೆ ಬಂದಿತು. ಇಷ್ಟು ದೂರ ಕ್ರಮಿಸಲು ಪ್ರತಿಭಟನಾಕಾರರು ಬರೋಬ್ಬರಿ ಆರು ಗಂಟೆ ತೆಗೆದುಕೊಂಡರು. ಉದ್ದಕ್ಕೂ ಸ್ವಾತಂತ್ರ್ಯ ಹೋರಾಟದ ಘೋಷಣೆಗಳು, ದೇಶ ಭಕ್ತಿಗೀತೆಗಳು ಅನುರಣಿಸಿದವು.

ಪರಿಸ್ಥಿತಿ ನಿಭಾಯಿಸಲು ಪೊಲೀಸರು ಹೈರಾಣಾಗಿ ಹೋದರು. ಆರು ಗಂಟೆಗಳವರೆಗೆ ಹೋರಾಟಗಾರರು ಚಲಿಸುತ್ತಿದ್ದರೆ ಸಾರ್ವಜನಿಕರು ಹಾಗೂ ವರ್ತಕರು ದಾರಿಯುದ್ದಕ್ಕೂ ಅವರಿಗೆಲ್ಲ ತಂಪು ಪಾನೀಯಗಳನ್ನು ನೀಡಿ ಅವರ ದಾಹ ತಣಿಸುವ ಪ್ರಯತ್ನ ಮಾಡಿದರು. ದೇಹದ ದಾಹ ತಣಿಯಬಹುದು ಆದರೆ ಸ್ವಾತಂತ್ರ್ಯದ ದಾಹ ತಣಿಸಲು ಇದು ಸಾಲದಲ್ಲ? ಕೊನೆಗೆ ಮೆಜೆಸ್ಟಿಕ್ ಪ್ರದೇಶದಲ್ಲಿ ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್ ಪ್ರತಿಕೃತಿಯನ್ನು ಸುಟ್ಟು ಪ್ರತಿಭಟನಾಕಾರರು ತೆರಳಿದರು. ಪ್ರತಿಭಟನೆ ನಡೆದುಎರಡು ದಿನದ ನಂತರ ಜಿ. ಚೆಂಗಲಾರಾಧ್ಯ ಹಾಗೂ ಬಿ. ಸಿ. ಭಾಗೀರಥಮ್ಮ ಅವರನ್ನು ಬಂಧಿಸಲಾಯಿತು.

ಭಾಗೀರಥಮ್ಮನವರೇ ಈ ಕುರಿತು ವಿವರಿಸುವಂತೆ, "೧೯೪೨ರ ಸೆಪ್ಟೆಂಬರ್ ೯ರಂದು ನನ್ನನ್ನೂ ನನ್ನ ಪತಿಯನ್ನೂ ವಾರಂಟ್ ತೆಗೆದುಕೊಂಡು ಬಂಧಿಸಿದರು. ಅದೇ ದಿನ ನನ್ನ ತವರು ಮನೆಯವರು ಗೌರಿ ಹಬ್ಬಕ್ಕೆ ಮದುವೆಯಾದ ಮೊದಲನೆ ವರ್ಷದ ಬಾಗಿನ ಕೊಡಿಸುವುದಕ್ಕೆ ಕರೆಯಲು

ಬಂದಿದ್ದರು. ಇತ್ತ ಸಂಬಂಧದ ತವರುಮನೆ, ಅತ್ತ ದೇಶಕ್ಕಾಗಿ ಸೆರೆಮನೆ... ತವರು ಮನೆಗಿಂತ ದೇಶದ ಸ್ವಾತಂತ್ರ್ಯ ಪಡೆಯುವ ಸೆರೆಮನೆ ಲೇಸೆಂದು ತೀರ್ಮಾನಿಸಿ ಬಂಧಿಸಲು ಬಂದಿದ್ದ ಪೊಲೀಸರನ್ನು ಹಿಂಬಾಲಿಸಿ ಹೋದೆವು." ಹೀಗಿತ್ತು ಅಂದಿನ ಸ್ವಾತಂತ್ರ್ಯ ಹೋರಾಟಗಾರರ ಮನೋಭಾವ.

### ಕ್ವಿಟ್ ಇಂಡಿಯಾ ಚಳವಳಿಯ ಪರಿಣಾಮ

ಇಡೀ ದೇಶದಲ್ಲಿ ಉಗ್ರವಾಗಿ ನಡೆದ ಈ ಚಳವಳಿ ಬ್ರಿಟಿಷರ ಸಿಂಹಾಸನ ನಡುಗಿಸಿದ್ದು ಮಾತ್ರ ನಿಜ. ಆದರೆ ಈ ಚಳವಳಿ ಬೆಂಗಳೂರಿನ ಜನಜೀವನದಲ್ಲಿ ಅಪಾರ ಬದಲಾವಣೆ ತಂದಿತು. ಕನಿಷ್ಠ ೫೦ ಸಾವಿರ ನಾಗರಿಕರಾದರೂ ಸಭೆ ಮೆರವಣಿಗೆ ಹರತಾಳಗಳಲ್ಲಿ ಭಾಗವಹಿಸಿ ದೇಶಭಕ್ತಿ ಪ್ರದರ್ಶಿಸಿದರು. ಐದು ಸಾವಿರಕ್ಕೂ ಹೆಚ್ಚು ಜನ ಪೊಲೀಸರಿಂದ ಬಂಧಿತರಾಗಿ ೨ ಸಾವಿರಕ್ಕೂ ಮೇಲ್ಪಟ್ಟು ಬೆಂಗಳೂರಿನ ಜನ ಜೈಲುವಾಸ ಅನುಭವಿಸಿದರು. ಚಳವಳಿಯಲ್ಲಿ ಭೂಗತರಾಗಿ ಇಲ್ಲವೆ ಜೈಲುವಾಸ ಅನುಭವಿಸಿದ ಜನ ಮುಂದೆ ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಸಮಾಜ ಸೇವೆ, ಲೇಖನ, ಪತ್ರಿಕೋದ್ಯಮ, ರಂಗಭೂಮಿ ಮುಂತಾದ ಕ್ಷೇತ್ರಗಳಲ್ಲಿ ರಾಷ್ಟ್ರಭಕ್ತಿ, ಸಾಮಾಜಿಕ ಪ್ರಜ್ಞೆಗಳ ಭಾವನೆಯಿಂದ ದುಡಿಯುವ ನಾಯಕರಾದರು. ಜೈಲಿಗೆ ಹೋದ ಅನೇಕ ತರುಣ ಹೈಸ್ಕೂಲ್ ವಿದ್ಯಾರ್ಥಿಗಳೂ ಕೂಡ ಅಲ್ಲಿನ ವಿದ್ಯಾವಂತ ಪ್ರಜ್ಞಾವಂತ ಹಿರಿಯ ದೇಶಭಕ್ತರ ಸಹವಾಸದಿಂದ ತಾವೂ ಲೋಕಾನುಭವ ಪಡೆದರು. ಬೆಂಗಳೂರು, ಮೈಸೂರು ಜೈಲುಗಳಲ್ಲಿ ಇದ್ದ ವಿದ್ಯಾರ್ಥಿಗಳಿಗೆ ಅಲ್ಲಿ ಹಲವು ವಾರ ನಾನಾ ರೀತಿಯ ಶೈಕ್ಷಣಿಕ ಹಿರಿಯ ಉಪನ್ಯಾಸಗಳನ್ನು ಖೈದಿಗಳು, ಹಿರಿಯ ವಿದ್ಯಾರ್ಥಿಗಳು ನೀಡಿದರು. ಧರ್ಮ, ಇತಿಹಾಸ, ರಾಜ್ಯಶಾಸ್ತ್ರ ಮುಂತಾದ ವಿಷಯಗಳಲ್ಲಿ ತರಗತಿಗಳಂತೆ ಉಪನ್ಯಾಸಗಳು ನಡೆದವು. ಆಯಾ ವಿದ್ಯಾರ್ಥಿಗಳ ಪಠ್ಯಕ್ರಮದ ಗಣಿತ, ವಿಜ್ಞಾನ, ಸಾಹಿತ್ಯಗಳ ಬಗೆಗೂ ಪಾಠಗಳು ಆಗುತ್ತಿದ್ದವು. ವ್ಯಾಯಾಮ, ಯೋಗ ನಿತ್ಯದ ಸಂಗತಿಗಳು.

ಮೈಸೂರು ಬ್ಯಾಂಕ್, ತುಳಸೀ ತೋಟ, ಬನಪ್ಪ ಪಾರ್ಕ್, ಹಗ್ವನ್ ಸರ್ಕಲ್, ಈಗಿನ ಕೆಂಪೇಗೌಡ ರಸ್ತೆ ಈ ಪ್ರದೇಶಗಳೆಲ್ಲ ಟಿಪ್ಪು ಕಾಲವೂ ಸೇರಿದಂತೆ ಹಿಂದಿನ ಕಾಲದಲ್ಲೂ ಯುದ್ಧ ಪ್ರದೇಶಗಳಾಗಿದ್ದವು. ನೆಲದ ಲಕ್ಷಣವೇ



ಇರಬೇಕು, ಇವತ್ತಿಗೂ ಬಹುತೇಕಎಲ್ಲ ಪ್ರತಿಭಟನೆ, ಚಳವಳಿ ಇತ್ಯಾದಿಗಳೂ ಇದೇ ಸ್ಥಳಗಳಿಂದಲೇ ಪ್ರಾರಂಭಆಗುತ್ತಿರುತ್ತವೆ.!

### ಲಾವಣಿಯಲ್ಲಿ ಬನಪ್ಪ ಪಾರ್ಕ್

ಸ್ವಾತಂತ್ರ್ಯ ಹೋರಾಟದ ಪ್ರತಿಭಟನೆಗಳಲ್ಲಿ ಕೇವಲ ಘೋಷಣೆಗಳಷ್ಟೇ ಇರುತ್ತಿರಲಿಲ್ಲ. ಅನೇಕರು ದೇಶ ಭಕ್ತಿಗೀತೆಗಳನ್ನು ಹಾಡುತ್ತ ಪ್ರತಿಭಟನಾನಿರತರಲ್ಲಿ ಸ್ವಾತಂತ್ರ್ಯದ ಜ್ಯೋತಿಯ ಪ್ರಖರತೆಯನ್ನು ಹೆಚ್ಚಿಸುತ್ತಿದ್ದರು. ಶಿಷ್ಟ ಶೈಲಿಯ ಗೀತೆಗಳಷ್ಟೆ ಅಲ್ಲದೆ ಜಾನಪದ ಶೈಲಿ, ಗೀಗಿ ಪದ ಹಾಗೂ ಲಾವಣಿ ಶೈಲಿಯಲ್ಲಿಯೂ ಸ್ವಾತಂತ್ರ್ಯದ ಗಾನಸುಧೆ ಹರಿಯುತ್ತಿತ್ತು. ಬ್ರಿಟಿಷ್ ಅಧಿಕಾರಿಗಳಿಗೆ ತಾವು ಏನು ಹೇಳುತ್ತಿದ್ದೇವೆ ಎನ್ನುವುದು ಅರ್ಥವೂ ಆಗಬಾರದು ಎಂಬ ಉದ್ದೇಶವೂ ಇದರ ಹಿಂದಿತ್ತು ಎನ್ನಲಾಗಿದೆ. ಇಂತಹದ್ದೇ ಮಾದರಿಯಲ್ಲಿ ಬಿ. ನೀಲಕಂಠಯ್ಯ ಅವರು "ಕಾಂಗ್ರೆಸ್ ಲಾವಣಿ" ಎಂಬ ರಚನೆಯಲ್ಲಿ ಬನಪ್ಪ ಪಾರ್ಕ್ ಘಟನೆ, ಹ್ಯಾಮಿಲ್ಟನ್ ಭವನ ಸತ್ಯಾಗ್ರಹಗಳನ್ನು ಚಿತ್ರಿಸಿದ್ದಾರೆ. ಸಾಕಷ್ಟು ದೊಡ್ಡದಾಗಿರುವ ಈ ಲಾವಣಿಯಲ್ಲಿ ನೇರವಾಗಿ ಈ ಘಟನೆಗಳನ್ನು ವಿವರಿಸುವ ನುಡಿಗಳನ್ನು ಇಲ್ಲಿ ನೀಡಲಾಗಿದೆ. ಈ ಲಾವಣಿಯನ್ನು ಖಡೀಚಾಲ್ ಧಾಟಿಯಲ್ಲಿ ಹಾಡಬೇಕು ಎಂದು "ಬಿಡುಗಡೆಯ ಹಾಡುಗಳು" ಕೃತಿಯಲ್ಲಿ ತಿಳಿಸಲಾಗಿದೆ.

### ಕಾಂಗ್ರೆಸ್ ಲಾವಣಿ

**ಧಾಟಿ: ಖಡೀಚಾಲ್**

ಶೃಂಗಾರದ ನವರಂಗದ ಮೈಸೂರ್ ಕಾಂಗ್ರೆಸ್‌ಘನವೆನ್ನುವನೊಬ್ಬ
ಕಾಂಗ್ರೆಸ್‌ನ ಸಂಗ್ರಾಮದ ಕೇಳಿದ ಆಂಗ್ಲರಿಗಾಯಿತು ಅಬ್ಬಬ್ಬಾ

ಅಬ್ಬಬ್ಬಾ ಈ ದಬ್ಬಾಳಿಕೆ ಅವನೊಬ್ಬನ ದೆಶೆಯಿಂದೆನ್ನುತ್ತಲೊಬ್ಬಾ
ದಬ್ಬಾಳಿಕೆಯನು ಎಬ್ಬಿಸಿದವ ನಿಜ ತಬ್ಬಲಿ ಎಂದನು ಮತ್ತೊಬ್ಬ

ಒಬ್ಬನಿಂದಲ್ಲವು ಶಿಬ್ಬಂದಿಬಳಾ ಕಬ್ಬಕ್ಕಿ ಎಂತಿಹರೆನುತೊಬ್ಬ
ಕೊಬ್ಬಿದದರ್ಪದ ಮೊಬ್ಬಿನೊಳಿರುವರ ಹಬ್ಬವಿದೆಂದನು ಹುಡುಗೊಬ್ಬ

ದಬ್ಬಾಳಿಕೆ ಸುಳಿ ಅಬ್ಬರ ಅಣಗಲಿ ದಬ್ಬೆಯು ಬಿತ್ತೆನಗೆನುತೊಬ್ಬ
ದಬ್ಬಾಳಿಕೆ ಮಹ ಬೊಬ್ಬೆಯ ಕೇಳುತ ತಬ್ಬಿಬ್ಬಾದನುಕಡೆಗೊಬ್ಬ

**ಟಿ. ಸಿದ್ದಲಿಂಗಯ್ಯ ಅವರ ನೇತೃತ್ವದಲ್ಲಿ ತಗಡೂರು ರಾಮಚಂದ್ರರಾಯರು ಮತ್ತು ವೀರಕೇಸರಿ ಸೀತಾರಾಮ ಶಾಸ್ತ್ರಿಗಳನ್ನು ಒಳಗೊಂಡ ಕ್ರಿಯಾ ಸಮಿತಿ ಕುರಿತು**

**(ದೊಡ್ಡಡನ್)**

ಒಡನೆಯ ಶಿದ್ದಲಿಂಗಯ್ಯನವರನು ಹಿಡಿದರು ಖಾನೂನ್ ಅನುಸರಿಸಿ
ಬಿಡದಲೆ ಸೀತಾರಾಮ ಶಾಸ್ತ್ರಿಗಳ ನಿಡಿದರು ಕೇಸಿನ ಕ್ರಮ ನಡೆಸಿ
ತಡಕು ತಗಡೂರ್ ರಾಮಚಂದ್ರನು ಹಿಡಿದು ತ್ರಿಜನರಂ ಜೊತೆಗೊಳಿಸಿ
ಹಿಡಿಯಿರಿ ಸೆರೆಮನೆ ದಾರಿ ನೀವೆನ್ನುತ ನುಡಿದರು ದರ್ಪದಿ ದಡಬಡಿಸಿ

**ಜೈಲಿನಲ್ಲಿ ಬಂಧಿಯಾದ ನಾಯಕರಕುರಿತು**

**(ಉಡನ್)**

ಮುಂದಾದ ಪರಿಯ ನೀವ್‌ಚಂದದಿ ಕೇಳಿರಿಯಲ್ಲಾ
ಬಂಧನದಿ ಬಿದ್ದ ನಮ್‌ದೇಶ ಮುಖಂಡ್ರಿಗೆಲ್ಲ
ಒಂದಾದರು ಸರಿ ಅನುಕೂಲವಿಲ್ಲದೋಯ್ತಲ್ಲ
ಎಂದೆಂದಿಗು ಸರಕಾರ್ ನಡತೆ ಇದುವೇ ಸರಿಯಲ್ಲ

**ಗುಲ್ಲುಡನ್**

ಕೂಡಿತೂ ಸರ್ಕಾರದಕೂಟ
ಮಾಡಿದರು ಯೋಚನೆಯನು ದೀಟ
ಹೂಡಿ ನೂರಿಪ್ಪತ್ನಾಲ್ಕರೇಟ
ಕೂಡಲೆ ಕಾಂಗ್ರೆಸ್ ವೀರ ಮುಖಂಡರ ಹಿಡಿದರು ಅಕಟಕಟಾ



**ಹೋರಾಟಗಾರರು ಜಾಮೀನಿಗೆ ಹಣ ನೀಡದೆ ಶಿಕ್ಷೆ ಅನುಭವಿಸಿದ ಕುರಿತು**

**ಶ್ಲೋಕ**

ಕೆ.ಟಿ. ಭಾಷ್ಯಂ, ಎನ್.ಸಿ. ತಿಮ್ಮಾರೆಡ್ಡಿಯವರುಗಳ್ ನಿಶ್ಚಯ
ಕೋರ್ಟಿನೊಳು ಕೇಸ್ ವಾದವಿಲ್ಲದೆ ಹೊಂದಿದರು ಮಹ ಶಿಕ್ಷೆಯ

**ಬನಪ್ಪ ಪಾರ್ಕ್‌ನಲ್ಲಿ ನಾರಿಮನ್‌ಘಟನೆ ಹಾಗೂ ಗುಂಡಿಗೆ ಪ್ರಾಣ ಕಳೆದುಕೊಂಡವರ ಕುರಿತು**

**ಚಾಲ್**

ಢಂಗಾದರು ನಮ್ ಬೆಂಗ್ಲೂರ್ ಪ್ರಜೆಗಳು ಹಿಂಗ್ಯಾಕ್ ಮಾಡಿದರೆನುತೊಬ್ಬ
ಕಾಂಗ್ರೆಸ್ ಘನ ಸಂಗ್ರಾಮದ ಕೇಳಿದ ಆಂಗ್ಲರಿಗಾಯಿತುಅಬ್ಬಬ್ಬಾ
ಶ್ರೀನರಿಮನ್ನರು ಭಾಷಣ ಮಾಡಿದ ಬನಪ್ಪ ಪಾರ್ಕಿನ ವಿವರಗಳು
ಏನೇಳಲಿ ನಾ ಮೂವತ್ತೊಂಭತ್ತನೆ ಸೆಕ್ಷನ್ ಜಾರಿಯು ಗಲಭೆಗಳು
ಶ್ರೀನರಿಮನ್ನರ ಭಾಷಣ ಕೇಳಲು ಅನೇಕ ಪ್ರಜೆಗಳು ಕೂಡಿರಲು
ಆ ನರಿಮನ್ನರ ಆಕ್ಷಣ ಹಿಡಿಯಲು ಅನಂತ ಜನಗಳ ಜೋಡುಗಳು
ಖಾನೂನೆಂಬುವ ಜ್ಞಾನವೆಯಿಲ್ಲದೆ ಮೇಲಿಂದ ಬಿದ್ದವು ಬೂಡ್ಸುಗಳು
ದೀನ ಗುಂಡಪ್ಪನ ಪ್ರಾಣವೆ ಹಾರಿತು ಮಾರನೆ ದಿನ ಗುಂಡೇಟಿನೊಳು

**ದೊಡ್ಡಡನ್**

ಕೇಳಿರೆಲ್ಲ ಮುವತ್ತೇಳನೆ ಇಸವಿಯ ಅಕ್ಟೋಬರಿಪ್ಪತ್ತೈದರೊಳು
ಪೇಳಲಿಕಸದಳ ಗಲಭೆಯ ಹಾವಳಿ ಕೆಂಪೇಗೌಡರ ಚೌಕದೊಳು
ತಳಮಳಗೊಳ್ಳುವ ಗೋಲಿ ಏಟುಗಳು ನೋಡಿಮರುಗೆ ವಿದ್ಯಾರ್ಥಿಗಳು
ತಾಳದೆ ಪೆಟ್ಟನು ಬಿದ್ದರೆಷ್ಟೋಜನ ವಿಕ್ಟೋರಿಯಾ ಆಸ್ಪತ್ರೆಯೊಳು

**ಜವಾಬ್ದಾರಿ ಸರ್ಕಾರದ ಹೋರಾಟದಕುರಿತು**

**ಶ್ಲೋಕ**

ವಾಕ್, ಸಭಾ ಮೇಣ್ ಪತ್ರಿಕಾಸ್ವಾತಂತ್ರ್ಯ ಮೈಸೂರ್ ಜನರಿಗೆ
ಬೇಕಾಗಿರುವುದುಜಬಾಬ್ದಾರ್ ಸರಕಾರ ಘನ ಮೈಸೂರಿಗೆ

*  *  *  *

## ಬನಪ್ಪನವರ ಕುರಿತು

ಬನಪ್ಪ ಪಾರ್ಕಿನಲ್ಲಿ ಹೋರಾಟಗಳು ನಡೆದ ಕಾರಣಕ್ಕೆ ಹಾಗೂ ಗೋಲಿಬಾರ್‌ನಲ್ಲಿ ಹುತಾತ್ಮರಾದವರನ್ನೂ ಸ್ಮರಿಸಿ ಅಲ್ಲೊಂದು ಸ್ಮಾರಕವನ್ನು ನಿರ್ಮಿಸಲಾಗಿದೆ. ಅದಕ್ಕೂ ಮುನ್ನ ಈ ಸ್ಥಳಕ್ಕೆ ಬನಪ್ಪ ಪಾರ್ಕ್ ಎಂಬ ಹೆಸರು ಏಕೆ ಮತ್ತು ಹೇಗೆ ಬಂದಿತು ಎಂಬುದನ್ನು ತಿಳಿಯೋಣ. ಬೆಂಗಳೂರಿನ ಇತಿಹಾಸದಲ್ಲಿ ಇಲ್ಲಿನ ಉದ್ಯಾನಗಳಿಗೆ ಹಾಗೂ ಪಾರ್ಕ್‌ಗಳಿಗೆ ಅನೇಕ ಗಣ್ಯರ ಹೆಸರನ್ನು ಇಟ್ಟಿರುವುದನ್ನು ಕಾಣುತ್ತೇವೆ. ಈ ಗಣ್ಯರು ಒಂದೋ ಬೆಂಗಳೂರಿನ ಅಭಿವೃದ್ಧಿಯಲ್ಲಿ ಗಣನೀಯ ಕೊಡುಗೆ ನೀಡಿದವರು, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರು, ಮುಂತಾದ ಸ್ತುತ್ಯರ್ಹಕಾರ್ಯ ಮಾಡಿದವರೇ. ಇಂಥವರ ಸಾಳಿನಲ್ಲಿ ೩೦–೪೦ರ ದಶಕದಲ್ಲಿ ಕಬ್ಬನ್ ಪೇಟೆ ಜನರಲ್ಲಿ ಮನೆಮಾತಾಗಿದ್ದ ಬನಪ್ಪನವರೂ ಒಬ್ಬರು. ಈ ಸ್ಥಳವನ್ನು ೧೮೬೦–೭೦ರ ದಶಕದವರೆಗೆ ಬೆಂಗಳೂರು ಪೇಟೆಯಕೋಟೆ ಆವರಿಸಿಕೊಂಡಿತ್ತು. ಬನಪ್ಪನವರು ಕಬ್ಬನ್‌ಪೇಟೆಯಲ್ಲಿ ವಾಸ ಮಾಡುತ್ತಿದ್ದರು. ವೂಡೇದ ಶಂಕರಪ್ಪ ಬನಪ್ಪ ಎನ್ನುವುದು ಅವರ ಪೂರ್ಣ ಹೆಸರು. ದೇವಾಂಗ ಸಮುದಾಯಅಂದರೆ ನೇಕಾರಿಕೆ ಕುಲ ಕಸುಬಾಗಿದ್ದ ಬನಪ್ಪನವರು ಧಾರ್ಮಿಕ ಚಟುವಟಿಕೆಗಳ ಮೂಲಕ ಧರ್ಮಾರ್ಥಗಳ ಮೂಲಕ ಗಣ್ಯರೆಂದು ಗುರುತಿಸಿಕೊಂಡವರಾಗಿದ್ದರು. ೧೯೩೨ರಲ್ಲಿ ಕಬ್ಬನ್‌ಪೇಟೆ ಸರಹದ್ದಿನಲ್ಲಿ ಅಂದರೆ ಈಗಿನ ಶ್ರೀ ಪ್ರಸನ್ನ ಗಣಪತಿ, ಶ್ರೀ ಓಂಕಾರ ಅಯ್ಯಪ್ಪ ಹಾಗೂ ಶ್ರೀ ಶನೈಶ್ಚರ ಸ್ವಾಮಿ ದೇವಾಲಯದ ಆವರಣದಲ್ಲಿ ಅಶ್ವತ್ಥಕಟ್ಟೆಯೊಂದನ್ನು ನಿರ್ಮಿಸಿ ನಾಗರ ಪ್ರತಿಷ್ಠೆ, ಗಣೇಶ ಪ್ರತಿಷ್ಠೆ ಮಾಡಿಸಿದರು. ೧೯೩೨ರ ಮಾರ್ಚ್ ೨೭ರಂದು ಆಗಿನ ಮುನಿಸಿಪಲ್ ಕಮಿಷನರ್ ಪಿ.ಎಚ್. ಕೃಷ್ಣರಾಯರು ಇದನ್ನು ಉದ್ಘಾಟಿಸಿದರು. ಈ ಕಾರ್ಯಕ್ರಮದ ಅಂಗವಾಗಿ ಅಂದು ಬನಪ್ಪನವರು ತಮ್ಮ ಕುಲಸ್ಥ ದೇವಾಂಗ ಸಮುದಾಯದ ಐದು ಬಡ ಜೋಡಿಯ ವಿವಾಹವನ್ನು ಮಾಡಿದರು. ಅಂದಿನಿಂದ ಅನೇಕ ಜನರ ಬಾಯಲ್ಲಿಬನಪ್ಪ ಪಾರ್ಕ್ ಎಂಬ ಮಾತು ಹರಿದಾಡುತ್ತಿತ್ತು. ಆದರೆ ನಾರಿಮನ್ ಘಟನೆ ಮತ್ತು ಗೋಲಿಬಾರ್ ನಡೆದ ನಂತರ ನಾರಿಮನ್ ಪಾರ್ಕ್ ಎಂದೇ ಕರೆಯಲಾರಂಭಿಸಿದರು. ೧೯೩೮ರ ನವೆಂಬರ್ ತಿಂಗಳಿನಲ್ಲಿ ಈ ಸ್ಥಳದ ಒಂದಷ್ಟು ಭಾಗವನ್ನು ಉದ್ಯಾನವನ್ನಾಗಿ ಅಭಿವೃದ್ಧಿ ಪಡಿಸಲು ಬನಪ್ಪನವರು ಮುನಿಸಿಪಾಲಿಟಿಗೆ ಮೂರು ಸಾವಿರ



ರೂಪಾಯಿ ದಾನವಾಗಿ ನೀಡಿದರು. ೧೯೩೮ರ ನವೆಂಬರ್ ೧೬ರಂದು ಆಗಿನ ಸರ್ಕಾರದ ದ್ವಿತೀಯ ಸಚಿವರಾಗಿದ್ದ ರಾಜಮಂತ್ರ ಪ್ರವೀಣ ಕೆ.ವಿ. ಅನಂತರಾಮ್ ಅವರ ಹಸ್ತದಿಂದ ಬನಪ್ಪ ಪಾರ್ಕ್‌ಎಂದು ಅಧಿಕೃತ ನಾಮಕರಣಗೊಳಿಸಿ ಉದ್ಘಾಟಿಸಿದರು. ೧೮೭೮ರಲ್ಲಿ ಜನಿಸಿದ ಬನಪ್ಪನವರು ತಮ್ಮ ೭೦ನೇ ವಯಸ್ಸಿನಲ್ಲಿ ೧೯೪೩ರಲ್ಲಿ ನಿಧನರಾದರು. ಇದಕ್ಕೂ ಮೂರು ವರ್ಷ ಮೊದಲು ೧೯೪೦ರಂದು ಮೈಸೂರು ಸರ್ಕಾರದಿಂದ ಸನ್ಮಾನಿಸಿ ಸನ್ಮಾನ ಪತ್ರ ನೀಡಲಾಗಿದೆ.



**ವೂಡೇದ ಜಿ. ಬನಪ್ಪನವರು**

ಮೈಸೂರು ಸಂಸ್ಥಾನದ ಲಾಂಛನದ ಕೆಳಭಾಗದಲ್ಲಿ "ಶ್ರೀಮನ್ಮಹಾರಾಜ ಬಹದೂರವರ ಸರ್ಕಾರದಿಂದ ಕೊಡಲ್ಪಟ್ಟ ಇಸ್ತಿಹಾರ್‌ನಾಮೆ" ಎಂಬ ಶೀರ್ಷಿಕೆಯಿದೆ.

ನಂಬರು ೧೭೨೦ ಸಿ.ಬಿ. ೬–೪೦–೨೪, ತಾರೀಖು ೧೨ನೆಯ ಅಕ್ಟೋಬರ್ ೧೯೪೦, ಮೊಕ್ಕಾಂ, ಮೈಸೂರು

ಶ್ರೀಮತ್ಸಮಸ್ತ ಭೂಮಂಡಲ ಮಂಡಲ ನಾಯಮಾನ ನಿಖಿಲ ದೇಶಾ ವತಂಸ ಕರ್ಣಾಟಕ ಜನಪದ ಸಂಪದದೀಷ್ಠಾನ ಭೂತ ಶ್ರೀಮನ್ನೀತೂರ ಮಹಾಸಂಸ್ಥಾನ ಮಧ್ಯದೇ ದೀಪ್ಯಮಾನ ನಿಖಿಲ ಕಲಾನಿಧಿ ಕುಲಕ್ರಮಾಗತ

ರಾಜಕ್ಷಿತಿಪಾಲ ಪ್ರಮುಖ ನಿಖಿಲ ರಾಜಾಧಿರಾಜ ಮಹಾರಾಜ ಚಕ್ರವರ್ತಿ ಮಂಡಲಾನುಭೂತ ದಿವ್ಯರತ್ನ ಸಿಂಹಾಸನಾರೂಪ ಶ್ರೀಮದ್ರಾಜಾದಿರಾಜ ರಾಜ ಪರಮೇಶ್ವರ ಪ್ರೌಢಪ್ರತಾಪ ಅಪ್ರತಿಮ ವೀರ ನರಪತಿ ಬಿರುತೆಂದೆಂಬರ ಗಂಡ ಲೋಕೈಕ ವೀರ ಯದುಕುಲ ಪಯಃಪಾರಾವಾರ ಕಲಾನಿಧಿ ಶಂಖ ಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತರಾದ ಕರ್ನಾಟಕ ಸಿಂಹಾನಾಧೀಶ್ವರ.



**ಬನಪ್ಪನವರು ನೆರವೇರಿಸಿದ ಸಾಮೂಹಿಕ ವಿವಾಹ**

## ಶ್ರೀಮಜ್ಜಯ ಚಾಮರಾಜೇಂದ್ರ ಒಡೆಯರ್ ಬಹದೂರವರು

ಕೆಳಗೆ ಕಂಡ ಮಹಾಶಯರು ಕೆಲವರು ದೇಶದ ಏಳಿಗೆಗೆ ಸಹಾಯಭೂತರಾಗಿ ಜನೋಪಕಾರ ಕಾರ್ಯಗಳನ್ನು ಮಾಡಿರುವುದರಿಂದ ತಮ್ಮ ಅನುಗ್ರಹಕ್ಕೆ ಪಾತ್ರರಾಗಿರುತ್ತಾರೆಂಬ ಸಂಗತಿಯನ್ನು ಶಾಲೀವಾಹನ ಶಕ ೧೮೬೩ನೆಯ ವಿಕ್ರಮನಾಮ ಸಂವತ್ಸರದ ಆಶ್ವಯುಜ ಶುದ್ಧ ದ್ವಾದಶೀ ಸ್ಥಿರವಾರದಲ್ಲು ನವರಾತ್ರಿ ಮಹೋತ್ಸವ ಪ್ರಯುಕ್ತವಾದದ ಬಾರಿನಲ್ಲಿ ತಿಳಿಯಪಡಿಸತಕ್ಕದ್ದೆಂದು ಅಪ್ಪಣೆ ದಯಪಾಲಿಸಿರುವುದನ್ನು ಈ ಮೂಲಕ ಪ್ರಕಟಿಸಿರುತ್ತದೆ.



## ಶ್ರೀಮಾನ್ ಬನಪ್ಪನವರು, ಬೆಂಗಳೂರು

ಇವರು ಬೆಂಗಳೂರು ನಗರದಲ್ಲಿ ಒಂದು ಉದ್ಯಾನದ ಏರ್ಪಾಡಿಗಾಗಿ ಧರ್ಮಾರ್ಥವಾಗಿ ಸಹಾಯ ಮಾಡಿದ್ದಾರೆ. ಇತರ ಧರ್ಮಕಾರ್ಯಗಳಲ್ಲಿ ಸಹ ಆಸಕ್ತಿ ವಹಿಸಿದ್ದಾರೆ.

ಹೀಗೆ ಬರೆದು ಮೈಸೂರು ಸರ್ಕಾರದ ಚೀಫ್ ಸೆಕ್ರೆಟರಿ ಸಹಿ ಮಾಡಿದ್ದಾರೆ. ಈಗಲೂ ಬನಪ್ಪನವರ ಕುಟುಂಬಸ್ಥರು ಅಲ್ಲಿನ ೧೪ನೇ ಅಡ್ಡರಸ್ತೆಯಲ್ಲಿ ಕುಲಕಸುಬಾದ ನೇಕಾರಿಕೆಯನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ.

ಗೋಲಿಬಾರ್ ಘಟನೆಯ ಸ್ಮರಣೆ ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾದವರ ಸ್ಮರಣೆಗಾಗಿ ೧೯೯೫ರ ಏಪ್ರಿಲ್ ೨೮ರಂದು ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸ್ವಾತಂತ್ರ್ಯ ಹೋರಾಟಗಾರರ ಸ್ಮಾರಕ ಸ್ಥೂಪವನ್ನು ನಿರ್ಮಿಸಲಾಯಿತು ಅಂದಿನ ಮುಖ್ಯಮಂತ್ರಿ ಎಚ್.ಡಿ. ದೇವೇಗೌಡ ಅವರು ಈ ಸ್ಥೂಪವನ್ನು ಉದ್ಘಾಟಿಸಿದರು.

ಸ್ಥೂಪದ ಒಂದು ಭಾಗದಲ್ಲಿ ಹೀಗೆ ಬರೆಯಲಾಗಿದೆ: "ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಸಮಸ್ತ ಭಾರತೀಯರಿಗೂ ಮೈಸೂರು ಕಾಂಗ್ರೆಸ್ ಹೂಡಿದ ಜವಾಬ್ದಾರಿ ಸರ್ಕಾರದ ಹೋರಾಟದಲ್ಲಿ ಪಾಲ್ಗೊಂಡ ಎಲ್ಲ ಸ್ವಾತಂತ್ರ್ಯ ಯೋಧರಿಗೂ ಈ ಸ್ಮಾರಕ ಸ್ಥೂಪವನ್ನು ಪ್ರೀತಿ ಗೌರವಗಳಿಂದ ಅರ್ಪಿಸಲಾಗಿದೆ. ಈ ಸ್ಥೂಪ ಮುಂದಿನ ಪೀಳಿಗೆಯಲ್ಲಿ ಸಚ್ಚಾರಿತ್ರ್ಯ, ಸಮಾನತೆ, ರಾಷ್ಟ್ರೀಯತೆ, ಭಾವೈಕ್ಯತೆಗಳನ್ನು ಮೂಡಿಸುವ ಸ್ಫೂರ್ತಿಯ ಚಿಲುಮೆಯಾಗಲಿ."

## ಸ್ವಾತಂತ್ರ್ಯ ಸ್ಥೂಪ



**ಬನಪ್ಪ ಪಾರ್ಕಿನಲ್ಲಿರುವ ಸ್ವಾತಂತ್ರ್ಯ ಸ್ಥೂಪ**



ಅದೇ ದಿಕ್ಕಿನ ಕೆಳಭಾಗದಲ್ಲಿ ಭಾಗದಲ್ಲಿ **"ಸ್ವರಾಜ್ಯದ ಸಾಫಲ್ಯತೆ: ನಮ್ಮ ಅಂತಃಶಕ್ತಿಯನ್ನೂ ಅತಿ ಕಠಿಣ ಪ್ರಸಂಗಗಳನ್ನು ಎದುರಿಸುವ ನಮ್ಮ ಸಾಮರ್ಥ್ಯವನ್ನೂ ಅವಲಂಬಿಸಿದೆ. –ಮಹಾತ್ಮಾಗಾಂಧಿ"** ಎಂದು ಬರೆಯಲಾಗಿದೆ.

ಮತ್ತೊಂದು ದಿಕ್ಕಿನಲ್ಲಿ ಹೀಗೆ ಬರೆಯಲಾಗಿದೆ: **"**ಬೆಂಗಳೂರಿನ ಜನತೆಯಲ್ಲಿ ರಾಷ್ಟ್ರ ಸ್ವಾತಂತ್ರ್ಯ ಜಾಗೃತಿ ಮೂಡಿಸಿದ ಮೊದಲಿಗರು ಆಗಿನ ಮುಂಬೈಯ ಮೇಯರ್ ಆಗಿದ್ದ ಕೆ.ಎಫ್. ನಾರಿಮನ್ನರು. ೨೦–೧೦–೧೯೩೭ರಂದು **(ಬೇರೆ ಎಲ್ಲ ಕಡೆಯ ದಾಖಲೆಗಳಲ್ಲಿ ಕಡೆಗಳಲ್ಲಿ ೨೪–೧೦–೧೯೩೭ ಎಂದು ನಮೂದಾಗಿದ್ದರೂ ಇಲ್ಲಿ ಮಾತ್ರ ಈ ದಿನಾಂಕವಿದೆ. ಬಹುಶಃ ಕಣ್ತಪ್ಪಿನಿಂದ ಆಗಿರಬಹುದು)** ಬನಪ್ಪ ಪಾರ್ಕಿನಲ್ಲಿಕಿಕ್ಕಿರಿದ ಸಾರ್ವಜನಿಕ ಸಭೆಗೆ ಮಾಡಿದ ಭಾಷಣ ಬೆಂಗಳೂರಿನ ಪೌರರನ್ನು ಬಡಿದೆಬ್ಬಿಸಿತು. ಅಂದು ಮೊದಲುಗೊಂಡು ಬೆಂಗಳೂರಿನ ಜನತೆಯಲ್ಲಿ ರಾಜಕೀಯ ಸ್ವಾತಂತ್ರ್ಯ ಪ್ರಜ್ಞೆ ಬೆಳೆದು ಅದು ಸಾಕಾರರೂಪ ತಾಳಿತು. ಈ ಚಾರಿತ್ರಿಕ ಘಟನೆ ಮೈಸೂರು ಕಾಂಗ್ರೆಸ್ ತದನಂತರ ಹೂಡಿದ ಜವಾಬ್ದಾರಿ ಸರ್ಕಾರದ ಹೋರಾಟಕ್ಕೆ ನಾಂದಿ ಯಾಯಿತು**"**.

ಈ ಬರಹದ ಕೆಳಭಾಗದಲ್ಲಿ ಹೀಗೆ ಬರೆಯಲಾಗಿದೆ:

**ಮಹಾತ್ಮಾಗಾಂಧೀಯವರ ಕನಸಿನ ಭಾರತ**

ಸತ್ಯ ಅಹಿಂಸೆ ನಮ್ಮ ಸಮಾಜಧರ್ಮವಾಗಲಿ.
ಸ್ವದೇಶಿ ಸ್ವಾವಲಂಬನೆ ನಮ್ಮ ಮೂಲಮಂತ್ರವಾಗಲಿ.
ಅಸ್ಪೃಶ್ಯತೆಯ ಕಳಂಕದಿಂದ ಸಮಾಜ ಮುಕ್ತವಾಗಲಿ.
ಖಾದಿಗ್ರಾಮೋದ್ಯೋಗ ಬೆಳೆದು ದೇಶ ಸ್ವಪರಿಪೂರ್ಣವಾಗಲಿ.
ಕುಡಿತದ ದುಶ್ಚಟದಿಂದ ಸಮಾಜ ಮುಕ್ತವಾಗಲಿ.
ವ್ಯವಸಾಯದಜಮೀನಿನ ಸಮಾಜೀಕರಣವಾಗಲಿ.
ಕಾರ್ಖಾನೆಗಳ ಹತೋಟಿ ನಿಸ್ವಸ್ಥ ಮಂಡಳೀಗಳಿಗಿರಲಿ.
ಶೋಷಣೆ ಮುಕ್ತ ಸಮಾನತೆಯ ರಾಜ್ಯ ಜಾರಿಗೆ ಬರಲಿ.
ನೆನಪಿರಲಿ, ತತ್ವರಹಿತ ರಾಜಕೀಯ ಒಂದು ಸಾಮಾಜಿಕ ಪಾತಕ.

ಅನ್ಯಾಯ ಕಂಡು ಬಂದಾಗ ಅದನ್ನು ಸತ್ಯಾಗ್ರಹದ ಮೂಲಕ ಪ್ರತಿಭಟಿಸುವ
ಶಕ್ತಿ ಪ್ರಜೆಗೆ ಬರಲಿ.

ಗಾಂಧೀಜಿಯ ಈ ಕನಸಿನ ಭಾರತವನ್ನು ನನಸು ಮಾಡುವ ಹೊಣೆಗಾರಿಕೆ ನಮ್ಮದು, ನಿಮ್ಮದು ಹಾಗೂ ಸರ್ಕಾರದ್ದು.

*   *   *   *

ಮೂರನೆಯ ದಿಕ್ಕಿನಲ್ಲಿ ಅಂದು ಸ್ಥೂಪ ಉದ್ಘಾಟಿಸಿದ ಎಚ್.ಡಿ. ದೇವೇಗೌಡ, ಮುಖ್ಯ ಅತಿಥಿಯಾಗಿದ್ದ ಬೆಂಗಳೂರು ಅಭಿವೃದ್ಧಿ ಮತ್ತು ವಕ್ಫ್ ಸಚಿವ ಆರ್. ರೋಷನ್ ಬೇಗ್, ಮಾಜಿ ಮಹಾಪೌರರು ಮತ್ತು ಕರ್ನಾಟಕ ಸ್ವಾತಂತ್ರ್ಯ ಹೋರಾಟಗಾರರ ಸಮಿತಿ ಅಧ್ಯಕ್ಷ ಜೆ. ಲಿಂಗಯ್ಯ, ಲೋಕಸಭಾ ಸದಸ್ಯ ವೆಂಕಟಗಿರಿಗೌಡ, ವಿಧಾನಸಭಾ ಸದಸ್ಯರಾದ ಎಸ್. ಪ್ರಮೀಳ ನೇಸರ್ಗಿ, ಮಹಾಪೌರ ಜಿ. ಕುಪ್ಪುಸ್ವಾಮಿ, ಪಾಲಿಕೆ ಸದಸ್ಯ ಎಂ.ಹೆಚ್. ಈಶ್ವರ್, ಉಪಮಹಾಪೌರರಾದ ಪ್ರೇಮಾ ಕಾರಿಯಪ್ಪ, ಆಯುಕ್ತ ರಾಜು ಪ್ರೇಮ್‌ಕುಮಾರ್ ಹೆಸರು ನಮೂದಾಗಿದೆ.

ಸ್ಥೂಪದ ಮತ್ತೊಂದು ದಿಕ್ಕಿನ ಕೆಳಭಾಗದಲ್ಲಿ ಹೀಗೆ ಬರೆಯಲಾಗಿದೆ: "ಕೆಲವೇ ಮಂದಿ ಬುದ್ಧಿಜೀವಿಗಳು ಕೂಡಿಕೊಂಡು ಆರಂಭಿಸಿದ ಸ್ವಾತಂತ್ರ್ಯ ಚಳವಳಿಯನ್ನು ಜನತಾ ಆಂದೋಲನವಾಗಿ ಪರಿವರ್ತಿಸಿದ ಕೀರ್ತಿ ಮಹಾತ್ಮ ಗಾಂಧೀಜಿ ಅವರದು. ಭಾರತದ ಸ್ವಾತಂತ್ರ್ಯದ ಫಲ ಕೇವಲ ಹಿಡಿ ಮಂದಿಯ ಪಾಲಾಗಬಾರದು. ಕಟ್ಟಕಡೆಯ ಮನುಷ್ಯನಿಗೂ ಅದು ತಲುಪಬೇಕು. ಕಾರ್ಮಿಕರು, ರೈತರು, ವಿದ್ಯಾರ್ಥಿಗಳು, ಯುವಕರು, ಮಹಿಳೆಯರು, ಎಲ್ಲ ಮತೀಯರು, ವೃತ್ತ ಪತ್ರಿಕೆಗಳು ಎಲ್ಲರೂ ಕೂಡಿ ಹೋರಾಟ ಮಾಡಿ ಸಂಪಾದಿಸಿದ ಸ್ವರಾಜ್ಯ ನಮ್ಮದು"

ಮೇಲ್ಭಾಗದಲ್ಲಿ ಮಹಾತ್ಮ ಗಾಂಧಿಯವರ ಇಂಗ್ಲಿಷ್ ಬರಹವಿದ್ದು, ಅಸ್ಪಷ್ಟವಾಗಿದೆ. ಉದ್ಘಾಟಕರ ಹೆಸರಿರುವ ಫಲಕದ ಮೇಲ್ಭಾಗದ ಸಣ್ಣ ಫಲಕ ಕಿತ್ತು ಹೋಗಿದೆಯಾದ್ದರಿಂದ ಅಲ್ಲಿ ಯಾವ ಬರಹವಿತ್ತು ಎಂದು ತಿಳಿದುಬಂದಿಲ್ಲ. ಸ್ಥೂಪದ ಮೇಲ್ಭಾಗದಲ್ಲಿ ಚರಕದ ಪ್ರತಿಕೃತಿಯನ್ನು ನಿರ್ಮಿಸಲಾಗಿದೆ. ಸುತ್ತಲೂ ಗ್ರಾನೈಟ್ ವೇದಿಕೆ, ಹತ್ತಿ ಇಳಿಯಲು ಮೆಟ್ಟಿಲುಗಳಿವೆ.



ಬನಪ್ಪ ಪಾರ್ಕಿನ ಇನ್ನೊಂದು ಭಾಗದಲ್ಲಿ ಮಕ್ಕಳ ಆಟಿಕೆಗಳು, ಬಹಿರಂಗ ವ್ಯಾಯಾಮ ಉಪಕರಣಗಳ ಜತೆಗೆ ಶ್ರೀ ದೇವರ ದಾಸಿಮಯ್ಯನವರ ಪ್ರತಿಮೆ ಸ್ಥಾಪಿಸಲಾಗಿದೆ. ಇದನ್ನು ಹಂಪಿ ಹೇಮಕೂಟದ ಶ್ರೀ ಗಾಯಿತ್ರಿ ಪೀಠ ಮಹಾಸಂಸ್ಥಾನ ಪೀಠಾಧ್ಯಕ್ಷರಾದ ಶ್ರೀ ದಯಾನಂದಪುರಿ ಮಹಾಸ್ವಾಮೀಜಿಯವರು ೨೦೨೦ರ ಆಗಸ್ಟ್ ೨೮ರಂದು ಉದ್ಘಾಟಿಸಿದ್ದಾರೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಂಸದರಾದ ಪಿ. ಸಿ. ಮೋಹನ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕಂದಾಯ ಸಚಿವ ಆರ್. ಅಶೋಕ್, ಶಿವಾಜಿನಗರ ಶಾಸಕ ರಿಜ್ವಾನ್ ಅರ್ಷದ್, ಬಿಬಿಎಂಪಿ ಮೇಯರ್ ಎಂ. ಗೌತಮ್‌ಕುಮಾರ್ ಹೆಸರಿದೆ.

*   *   *   *

## ಆಕರ


- ಮೈಸೂರು ವಿಶ್ವವಿದ್ಯಾಲಯ ವಿಶ್ವಕೋಶ: ಇತಿಹಾಸ ಮತ್ತು ಪುರಾತತ್ವ.
- ಬೆಂಗಳೂರು ದರ್ಶನ.
- ಬೆಂಗಳೂರಿನ ಇತಿಹಾಸ– ಬ.ನ. ಸುಂದರರಾವ್.
- ಬೆಂಗಳೂರು ನಗರ ಕಾರ್ಪೊರೇಷನ್ ಬೆಳ್ಳಿಹಬ್ಬ– ೧೯೭೪.
- ಬೆಂಗಳೂರಿನ ಇತಿಹಾಸ– ಸ್ಥಾಪನೆಯಿಂದ ಸ್ವರಾಜ್ಯ ಲಭಿಸುವವರೆಗೆ– ಬ.ನ. ಸುಂದರರಾವ್.
- ಕರ್ನಾಟಕ ಚರಿತ್ರೆ– ಪ್ರೊ. ಬಿ. ಷೇಕ್ ಅಲಿ.
- ಕರ್ನಾಟಕದ ಸಂಕ್ಷಿಪ್ತ ಇತಿಹಾಸ– ಯು. ಸೂರ್ಯನಾಥ ಕಾಮತ್.
- ಬೆಂಗಳೂರು ಜಿಲ್ಲಾ ಗೆಜೆಟಿಯರ್.
- ಬಿಡುಗಡೆಯ ಹಾಡುಗಳು(ಸ್ವಾತಂತ್ರ್ಯ ಹೋರಾಟದ ಕಾಲದ ಗೇಯ ಪದ್ಯಗಳು)– ಸಂಪಾದಕ: ಡಾ. ಸೂರ್ಯನಾಥ ಕಾಮತ್.
- ದಿ ಮಿಥಿಕ್ ಸೊಸೈಟಿ ಗ್ರಂಥಾಲಯ, ನೃಪತುಂಗರಸ್ತೆ.
- ಶ್ರೀ ಸುರೇಶ್ ಮೂನಾ, ಇತಿಹಾಸಕಾರರು, ಬೆಂಗಳೂರು.
- ದೇವುಡು ನರಸಿಂಹ ಶಾಸ್ತ್ರಿ: ಜೀವನದ ಕಿರು ಪರಿಚಯ. –ಪ್ರೊ. ಜಿ. ಅಶ್ವತ್ಥನಾರಾಯಣ, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ. ಮೊದಲ ಮುದ್ರಣ ಜೂನ್–೨೦೦೦, ದ್ವಿತೀಯ ಮುದ್ರಣ ಅಕ್ಟೋಬರ್ ೨೦೧೨.
- ಆಧುನಿಕ ಬೆಂಗಳೂರು, ವೇಮಗಲ್ ಸೋಮಶೇಖರ್.
- ದೇವಾಂಗ ಸಂಘದ ಭಾಸ್ಕರ್, ಬನಪ್ಪನವರ ಮರಿಮೊಮ್ಮಗ ಶಿವಶಂಕರ್.
- Dr. N. S. HARDIKER: V.S. NARAYANA RAO PUBLICATIONS DIVISION MINISTRY OF INFORMATION AND BROADCASTING GOVERNMENT OF INDIA-June 1985 (Asadha 1907).
- www.archive.org
- SANKETI AUTOBIOGRAPHIES Editor K. Sundara Raju Published by Samudaya Adhyayana Kendra Charitable Trust (R.) 3059, 4th 'A' Cross Gokulam Park Road Gokulam, Mysore-570 002, Pages : xxi + 429 First Edition: 2010.
- DICTIONARY OF MARTYRS INDIA'S FREEDOM STRUGGLE (1857-1947) Vol. 5 Andhra Pradesh, Telangana, Karnataka, Tamil Nadu & Kerala: General Editor Arvind P. Jamkhedkar. Published by MINISTRY OF CULTURE, GOVERNMENT OF IDNIA AND INDIAN COUNCIL OF HISTORICAL RESEARCH: First Edition 2018.
- HISTORY OF FREEDOM MOVEMENT IN KARNATAKA -Volume II- Prof. G. S. Halappa.


❖ ❖ ❖

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |

| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |



| | | | |
|---|---|---|---|
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |

| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ३೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ३೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ३೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ३೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ३೦/– |